ಸುಧಾಸಿಞ್ಚನ

ಕಾವ್ಯ, ಶಾಸ್ತ್ರಗಳನ್ನು ಕುರಿತಾದ ಲೇಖನಮಾಲೆ

ಕೃಷ್ಣ ಕಮಲ ವೇದಾಂತ ಪಾಠಶಾಲಾ

ವಿಷಯಾನುಕ್ರಮಣಿಕೆ

1. ಶ್ರೀಮಚ್ಛಂಕರಭಗವತ್ಪಾದರ ಪ್ರಾರ್ಥನೆ	ಎ. ಮೂರ್ತಿ	01
2. ಸರ್ವಾತ್ಮಭಾವ	ಬಿ.ಎಸ್. ಅರವಿನ್ದಬಾಬು	03
3. ಉತ್ತರಕಾಂಡ ಶ್ರೀಮದ್ವಾಲ್ಮೀಕಿರಾಮಾಯಣ	ಡಾ|| ಟಿ.ವಿ ಸತ್ಯನಾರಾಯಣ	06
4. अविद्यास्वरूपविमर्शः	डा. मणिद्राविडशास्त्री	11
5. ಚತುಃಶ್ಲೋಕಿ ಭಾಗವತಮ್	ಶ್ರೀಮತಿ ಇಂದಿರಾ ಶಾಸ್ತ್ರಿ	15
6. avidyA	Dr. jacqueline Hirst	19

This content should not be copied/reproduced without the consent of Krishna Kamala Pathashaala

ಶ್ರೀಮಚ್ಛಙ್ಕರಭಗವತ್ಪಾದರ ಪ್ರಾರ್ಥನೆ

ಎ. ಮೂರ್ತಿ
ಬೆಂಗಳೂರು

ಉದ್ಧೃತ್ಯ ವೇದಪಯಸಃ ಕಮಲಾಮಿವಾಬ್ಧೇಃ ಆಲಿಂಗಿತಾಖಿಲಜಗತ್ಪ್ರಭವೈಕಮೂರ್ತಿಮ್ ।
ವಿದ್ಯಾಮಶೇಷಜಗತಾಂ ಸುಖದಾಮದಾದ್ಯಃ ತಂ ಶಂಕರಂ ವಿಮಲಭಾಷ್ಯಕೃತಂ ನಮಾಮಿ ॥

ಪಞ್ಚಪಾದಿಕಾವಿವರಣಮ್
ಪ್ರಕಾಶಾತ್ಮಾ ಯತಿಃ

ಅನ್ವಯ– ಅಬ್ಧೇಃ ಕಮಲಾಮ್ ಇವ, ಯಃ ವೇದಪಯಸಃ ಸುಖದಾಂ ವಿದ್ಯಾಮ್ ಉದ್ಧೃತ್ಯ ಅಶೇಷಜಗತಾಂ ಅದಾತ್ ತಂ ಆಲಿಂಗಿತಾಖಿಲಜಗತ್ಪ್ರಭವೈಕಮೂರ್ತಿಮ್ ವಿಮಲಭಾಷ್ಯಕೃತಂ ಶಂಕರಂ ನಮಾಮಿ

ಅನ್ವಯಾರ್ಥ– ಕ್ಷೀರಸಾಗರದಿಂದ ಲಕ್ಷ್ಮಿಯನ್ನು ಎತ್ತಿತಂದಂತೆ, ಯಾರು ವೇದವೆಂಬ ಕ್ಷೀರಸಾಗರದಿಂದ, ವಿಷಯಸುಖಗಳಿಗೆ ಹೊರತಾಗಿರುವ ಶಾಶ್ವತವೂ, ಸ್ವರೂಪವೂ ಆದ ಸುಖವನ್ನು ತಂದುಕೊಡುವ ಬ್ರಹ್ಮವಿದ್ಯೆಯನ್ನು ಎತ್ತಿತಂದು ಸಕಲಜಗತ್ತಿಗೂ ಅನುಗ್ರಹಮಾಡಿರುವನೋ ಅಂತಹ ಸಮಸ್ತಜಗತ್ತಿನಲ್ಲಿ ಆದರಿಸಲ್ಪಟ್ಟಿರುವ ಏಕೈಕ ವ್ಯಕ್ತಿಯೂ, ಪ್ರಸನ್ನಗಂಭೀರಭಾಷ್ಯವನ್ನು ರಚನೆಮಾಡಿರುವವನೂ ಆದ ಶಂಕರನನ್ನು ನಾನು ನಮಸ್ಕರಿಸುತ್ತೇನೆ.

ವಿವರಣೆ– ಶ್ರೀಶಂಕರಭಗವತ್ಪಾದಾಚಾರ್ಯರ ಸಾಕ್ಷಾಚ್ಛಿಷ್ಯರಾದ ಶ್ರೀಪದ್ಮಪಾದರು ಆಚಾರ್ಯರ ಶಾರೀರಕಮೀಮಾಂಸಾಭಾಷ್ಯಕ್ಕೆ ಪಞ್ಚಪಾದಿಕಾ ಎಂಬ ಹೆಸರಿನಿಂದ ವ್ಯಾಖ್ಯಾನವನ್ನು ಮಾಡಿರುತ್ತಾರೆ. ಈ ವ್ಯಾಖ್ಯಾನಗ್ರನ್ಥಕ್ಕೆ ವಿವರಣಾತ್ಮಕವಾಗಿ **ಪ್ರಕಾಶಾತ್ಮಾ ಯತಿ**ಗಳೆಂಬ ಸಂನ್ಯಾಸಿಶ್ರೇಷ್ಠರು **ಪಞ್ಚಪಾದಿಕಾವಿವರಣಮ್** ಎಂಬ ಗ್ರನ್ಥವನ್ನು ರಚಿಸಿರುತ್ತಾರೆ. ಅದರಲ್ಲಿ ಈ ಯತಿಗಳು ಮೇಲಿನ ಪ್ರಶಸ್ತಿಶ್ಲೋಕದಿಂದ ಭಾಷ್ಯಕಾರರಾದ ಆಚಾರ್ಯ ಶ್ರೀಶಂಕರರನ್ನು ನಮಿಸಿ ತಮ್ಮ ಗ್ರನ್ಥವನ್ನು ಪ್ರಾರಂಭಿಸಿರುತ್ತಾರೆ.

ಹಿಂದೆ ದೇವಾಸುರರು ಅಮೃತಕ್ಕಾಗಿ ಕ್ಷೀರಸಾಗರವನ್ನು ಮಥನಮಾಡಿದಾಗ ಅದರಿಂದ ಉದ್ಭವವಾದವಳೇ ಮಹಾಲಕ್ಷ್ಮಿ. ಸಕಲವಿಧಕಶ್ಮಲಗಳಿಂದಲೂ ಹೊರತಾದ ಅನರ್ಘ್ಯಸ್ತ್ರೀರತ್ನ. ಅವರು ಮಥಿಸಿದ್ದು ಭೌತಿಕವಾದ ಸಾಗರ. ಆದರೆ ಮತ್ತೊಂದು ಸಾಗರವಿದೆ. ಅದೇ ಜ್ಞಾನಸಾಗರ. ಸಕಲವಿದ್ಯೆಗಳ ಆಕರ. ಅದೇ ವೇದಗಳು. ಇವು ಅಪೌರುಷೇಯ. ಯಾವ ಪುರುಷನಿಂದಲೂ ಸಂಕಲ್ಪಾತ್ಮಕವಾಗಿ ರಚಿಸಲ್ಪಟ್ಟಿರುವುದಲ್ಲ. ಪರಮಾತ್ಮನಿಂದಲೇ ನೇರವಾಗಿ ಯಾವ ಪ್ರಯತ್ನವೂ ಇಲ್ಲದಂತೆ ನಿಃಶ್ವಸಿತವಾಗಿ ಬಂದದ್ದು. **'ಅಸ್ಯ ಮಹತೋ ಭೂತಸ್ಯ ನಿಃಶ್ವಸಿತಮೇತದ್ಯದ್ ಋಗ್ವೇದಃ'**. ಇದರಲ್ಲಿ ಕರ್ಮಕಾಂಡ ಮತ್ತು ಜ್ಞಾನಕಾಂಡ ಎಂಬುದಾಗಿ ಎರಡು ಭಾಗಗಳಿವೆ. ಕರ್ಮಕಾಂಡದಲ್ಲಿ ವೈದಿಕಕರ್ಮಗಳಿಗೆ ವಿಷಯವಾಗಿ ಆಮ್ನಾತವಾಗಿರುವ ಜ್ಞಾನವು **ಕರ್ತೃತನ್ತ್ರ.** ಈ ಜ್ಞಾನವು ಕರ್ತೃವಿನ ಇಚ್ಛೆಗೆ ಅಧೀನಕ್ಕೆ ಒಳಪಟ್ಟದ್ದಾಗಿರುತ್ತದೆ. ಇಲ್ಲಿ ಎಲ್ಲ ವಿಧವಾದ ವಿಕಲ್ಪ, ಉತ್ಸರ್ಗ ಮತ್ತು ಅಪವಾದಗಳಿಗೂ ಅವಕಾಶವಿರುತ್ತದೆ. ಬೇಕಾದರೆ ಮಾಡಬಹುದು. ಮಾಡದೆಯೂ ಇರಬಹುದು ಅಥವಾ

This content should not be copied/reproduced without the consent of Krishna Kamala Pathashaala

ಬೇರೆಯ ವಿಧಾನಗಳಿಂದಲೂ ಮಾಡಬಹುದು. ಆದರೆ ಜ್ಞಾನಕಾಂಡದಲ್ಲಿ ಪರಬ್ರಹ್ಮಕ್ಕೆ ಅಥವಾ ಪರಮಾತ್ಮನ ಯಥಾರ್ಥಜ್ಞಾನಕ್ಕೆ ವಿಷಯವಾಗಿ ಆಮ್ನಾತವಾಗಿರುವುದು **ವಸ್ತುತನ್ತ್ರ**. ಇದು ವಸ್ತುವಿಗೆ ಅಧೀನವಾಗಿರುತ್ತದೆಯೇ ಹೊರತು ಕರ್ತೃವಿಗೆ ಅಧೀನವಾಗಿರುವುದಿಲ್ಲ. ಉದಾಹರಣೆಗೆ, ಒಂದು ಪುಸ್ತಕವನ್ನು ಪುಸ್ತಕ ಎಂದು ತಿಳಿಯುವುದು ವಸ್ತುತನ್ತ್ರಜ್ಞಾನ. ಇದನ್ನೇ ಸಮ್ಯಗ್ಜ್ಞಾನವೆಂದೂ ಹೇಳುತ್ತಾರೆ. ಇದು ಸಾರ್ವಕಾಲಿಕ, ಸಾರ್ವಜನೀನ ಹಾಗೂ ಸಾರ್ವತ್ರಿಕ. ಆದರೆ ಆ ಪುಸ್ತಕವನ್ನೇ ಸರಸ್ವತಿಯೆಂದು ಭಾವಿಸುವುದು ಕರ್ತೃತನ್ತ್ರಜ್ಞಾನ. ಇಲ್ಲಿ ಶ್ರದ್ಧಾಭಕ್ತಿಗಳಿಗೇ ಅಗ್ರಸ್ಥಾನ. ಶ್ರದ್ಧಾಭಕ್ತಿಗಳಿರುವವನು ಇದನ್ನು ಸರಸ್ವತಿಯೆಂದು ಪೂಜಿಸುತ್ತಾನೆ. ಇಲ್ಲದಿರುವವನು ಪೂಜಿಸುವುದಿಲ್ಲ. ಇದು ಕರ್ತೃವಿಗೆ ಅಧೀನವಾದ ಜ್ಞಾನ. ಸಾರ್ವಕಾಲಿಕವೂ ಅಲ್ಲ. ಶ್ರದ್ಧಾಭಕ್ತಿಗಳಿರುವವರೆಗೆ ಮಾತ್ರ ಸಾಧ್ಯ. ಸಾರ್ವಜನೀನವೂ ಅಲ್ಲ. ಪ್ರತಿಯೊಬ್ಬರೂ ಹೀಗೇ ತಿಳಿಯಬೇಕೆಂಬ ನಿಯಮವೂ ಇರುವುದಿಲ್ಲ.

ಶಂಕರಭಗವತ್ಪೂಜ್ಯಪಾದರು ವೇದಗಳೆಂಬ ಕ್ಷೀರಸಾಗರವನ್ನು ಮಥಿಸಿ ಲೋಕಕ್ಕೆ ಕರುಣಿಸಿರುವುದು ವಸ್ತುತನ್ತ್ರರೂಪವಾಗಿರುವ **ಆತ್ಮಜ್ಞಾನ**. ಯಾವ ಜ್ಞಾನವನ್ನು ಪಡೆಯುವುದರಿಂದ ಪ್ರತಿಯೊಬ್ಬ ಜೀವಿಯೂ, ಸುಖದುಃಖ, ಜನ್ಮಮರಣ ಮುಂತಾದ ದ್ವನ್ದ್ವಾತ್ಮಕವಾದ ಸಂಸಾರದಿಂದಲೇ ಆತ್ಯನ್ತಿಕವಾಗಿ ಬಿಡುಗಡೆಯನ್ನು ಹೊಂದಿ ತನ್ನ ಪರಮಾರ್ಥಸ್ವರೂಪದಲ್ಲಿಯೇ ನೆಲೆನಿಲ್ಲುವುದೆಂಬ ಪರಮಪುರುಷಾರ್ಥವಾದ ಮೋಕ್ಷವನ್ನೇ ಪಡೆಯುತ್ತಾನೆಯೋ ಅಂತಹ **ತತ್ತ್ವಜ್ಞಾನ**. ಇಂತಹ, ಸಕಲಜೀವಿಗಳಿಗೂ ಶ್ರೇಯಸ್ಸನ್ನೂ ಹಿತವನ್ನೂ ಉಂಟುಮಾಡುವ ಆತ್ಮಜ್ಞಾನವನ್ನು ವೇದಗಳೆಂಬ ಕ್ಷೀರಸಾಗರದಿಂದ ತನ್ನ ಪ್ರಸನ್ನಗಂಭೀರಭಾಷ್ಯರಚನೆಯ ಮೂಲಕ ಎತ್ತಿ ತಂದು ಅನುಗ್ರಹಿಸಿದನೋ ಅಂತಹ ಲೋಕೈಕಪೂಜ್ಯನೂ, ಪರಮಕಾರುಣಿಕನೂ ಆಗಿರುವ ಶ್ರೀಶಂಕರನನ್ನು ನಾನು ತಲೆಬಾಗಿ ನಮಸ್ಕರಿಸುತ್ತೇನೆ.

This content should not be copied/reproduced without the consent of Krishna Kamala Pathashaala

ಸರ್ವಾತ್ಮಭಾವ

ಋಗ್ವೇದದ ವಾಗಾಂಭ್ರಣೀ ಸೂಕ್ತದ ತಾತ್ಪರ್ಯ
ಶ್ರೀಮತ್ಸಾಯಣಭಾಷ್ಯಾಧಾರಿತ

ಬಿ.ಎಸ್. ಅರವಿನ್ದಬಾಬು
ನ್ಯಾಯವಾದಿಗಳು
ಬೆಂಗಳೂರು
ಮೊ. 8762487499

ಅಹಂ ರುದ್ರೇಭಿರ್ವಸುಭಿಶ್ಚರಾಮ್ಯಹಮಾದಿತ್ಯೈರುತ ವಿಶ್ವದೇವೈಃ ।
ಅಹಂ ಮಿತ್ರಾವರುಣೋಭಾ ಬಿಭರ್ಮ್ಯಹಮಿಂದ್ರಾಗ್ನೀ ಅಹಮಶ್ವಿನೋಭಾ ॥

ಇದು ಋಗ್ವೇದದಲ್ಲಿ ಆಮ್ನಾತವಾಗಿರುವ ಒಂದು ಮನ್ತ್ರ. 10 ನೆಯ ಮಂಡಲ, 10 ನೆಯ ಅನುವಾಕ 125 ನೆಯ ಸೂಕ್ತದಲ್ಲಿ ಪ್ರಥಮಮನ್ತ್ರ. ಈ ಸೂಕ್ತದಲ್ಲಿ ಒಟ್ಟು 8 ಋಕ್ಕುಗಳಿವೆ. ಈ ಎಂಟು ಋಕ್ಕುಗಳಲ್ಲಿ 2 ನೆಯ ಋಕ್ಕು ಮಾತ್ರ ಜಗತೀ ಛನ್ದಸ್ಸಿನಲ್ಲಿ ನಿಬದ್ಧವಾಗಿದೆ. ಉಳಿದ ಏಳೂ ಋಕ್ಕುಗಳು ತ್ರಿಷ್ಟುಪ್ ಛನ್ದಸ್ಸಿನಲ್ಲಿ ನಿಬದ್ಧವಾಗಿವೆ. ವೇದಾನ್ತಗಳಲ್ಲಿ ಬ್ರಹ್ಮಜ್ಞಾನಿಗೆ ಲಕ್ಷಣವಾಗಿ ಹೇಳಿರುವ ಸರ್ವಾತ್ಮಭಾವವು ಈ ಎಂಟೂ ಋಕ್ಕುಗಳಲ್ಲಿ ಅಭಿವ್ಯಕ್ತವಾಗಿದೆ. ಈ ಸರ್ವಾತ್ಮಭಾವವನ್ನು ಅನುಭವದಲ್ಲಿ ಕಂಡುಕೊಂಡಿರುವ ದ್ರಷ್ಟ್ರೀ **'ವಾಕ್'** ಎಂಬ ಒಬ್ಬ ಸ್ತ್ರೀ. ಇವಳು ಅಂಭ್ರಣ ಎಂಬ ಋಷಿಯ ಪುತ್ರಿ. ಅಂಭ್ರಣ ಋಷಿಯ ಮಗಳಾದ್ದರಿಂದ ಇವಳು **ಆಂಭ್ರಣೀ. ಅಂಭ್ರಣಸ್ಯ ಅಪತ್ಯಂ ಸ್ತ್ರೀ ಆಂಭ್ರಣೀ. ವಾಕ್ ಚ ಅಸೌ ಆಂಭ್ರಣೀ ಚ ವಾಗಾಂಭ್ರಣೀ.** ಈ ವಾಗಾಂಭ್ರಣೀ ಎಂಬ ಬ್ರಹ್ಮವಿದಳು ಬ್ರಹ್ಮತಾದಾತ್ಮ್ಯಜ್ಞಾನವುಳ್ಳವಳಾಗಿ ಅದ್ವೈತಾನುಭವದಿಂದ **'ಅಹಂ ರುದ್ರೇಭಿಃ.. ..'** ಎಂದು ಮುಂತಾಗಿ **'ಏತಾವತೀ ಮಹಿನಾ ಸಂಬಭೂವ'** ಎಂಬಲ್ಲಿಯವರೆಗಿನ ಎಂಟು ಋಕ್ಕುಗಳಿಂದ ತನ್ನನ್ನು ತಾನೇ ಸ್ತುತಿಸಿಕೊಂಡಿರುತ್ತಾಳೆ. ಹಾಗಾಗಿ ಈ ಸೂಕ್ತಕ್ಕೆ ವಾಗಾಂಭ್ರಣಿಯೇ ಋಷಿ ಮತ್ತು **'ಸತ್ಯಂ ಜ್ಞಾನಮ್ ಅನನ್ತಂ ಬ್ರಹ್ಮ'** ಎಂದು ತೈತ್ತಿರೀಯೋಪನಿಷತ್ತಿನಲ್ಲಿ ಲಕ್ಷಿತವಾಗಿರುವ ಪರಮಾತ್ಮನೇ ದೇವತೆ. ಇದು **ದೇವೀಸೂಕ್ತ**ವೆಂದು ಪ್ರಸಿದ್ಧವಾಗಿ, ಪಾರಾಯಣದಲ್ಲೂ ಅಭಿಷೇಕದಲ್ಲೂ ಇದಕ್ಕೆ ವಿನಿಯೋಗವನ್ನು ಹೇಳಿರುತ್ತಾರೆ. ಸಾಮಾನ್ಯವಾಗಿ ಬ್ರಹ್ಮಜಿಜ್ಞಾಸೆಯು ಪುರುಷಪ್ರಧಾನವಾಗಿ ಹೇಳಲ್ಪಟ್ಟಿರುವುದು ಕಂಡುಬರುತ್ತದೆ. ಉದಾ– ಋಗ್ವೇದದ 4–3–26 ರಲ್ಲಿ ಆಮ್ನಾತವಾಗಿರುವ ಏಳು ಋಕ್ಕುಗಳಲ್ಲಿ **'ಅಹಂ ಮನುರಭವಂ ಸೂರ್ಯಶ್ಚ ಅಹಂ ಕಕ್ಷೀವಾನ್ .. .. '** ಎಂಬ ಪ್ರಥಮಮನ್ತ್ರದಿಂದ ಇದೇ ಸರ್ವಾತ್ಮಭಾವವನ್ನು ಋಷಿಯಾದ **ವಾಮದೇವನು** ಕಂಡುಕೊಂಡಿರುತ್ತಾನೆ. ಇಲ್ಲಿ ಸ್ತ್ರೀಯಾದ ವಾಗಾಂಭ್ರಣಿಯು ತನ್ನ ಸರ್ವಾತ್ಮಭಾವಾನುಭವವನ್ನು ಹೇಳಿರುವುದು ವಿಶೇಷವಾಗಿದೆ. ಇಲ್ಲಿ ಗಮನಿಸಬೇಕಾದ ಕೆಲವು ಅಂಶಗಳಿವೆ–

1. ವೇದಾಧ್ಯಯನದಲ್ಲಿಯೂ, ವೈದಿಕ ಕರ್ಮಾನುಷ್ಠಾನುಗಳಲ್ಲಿಯೂ ಸ್ವತನ್ತ್ರವಾಗಿ ಸ್ತ್ರೀಯರಿಗೆ ಅಧಿಕಾರವಿಲ್ಲವೆಂದು ಶಾಸ್ತ್ರಗಳು ಹೇಳುತ್ತಿದ್ದರೂ, ವೇದಾನ್ತಗಳಲ್ಲಿಯೂ, ಬ್ರಹ್ಮಜಿಜ್ಞಾಸೆಯಲ್ಲಿಯೂ ಸ್ತ್ರೀಯರಿಗೆ ಕೂಡ ಸ್ವತನ್ತ್ರವಾಗಿ ಅಧಿಕಾರವಿದೆ ಎನ್ನುವುದು ಇದರಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ.

2. ಬ್ರಹ್ಮಜಿಜ್ಞಾಸೆಗೆ ವೈದಿಕಕರ್ಮಜ್ಞಾನದ ಹಂಗೇನೂ ಇರುವುದಿಲ್ಲ. ಆದ್ದರಿಂದ ತ್ರೈವರ್ಣಿಕರಲ್ಲದ ಇತರರಿಗೂ ಬ್ರಹ್ಮಜಿಜ್ಞಾಸೆಯಲ್ಲಿ ಅಧಿಕಾರವಿದೆ.

This content should not be copied/reproduced without the consent of Krishna Kamala Pathashaala

3. ಭಾಷ್ಯಕಾರರಾದ ಭಗವಾನ್ ಶಂಕರರು ತಮ್ಮ ಶಾರೀರಕಮೀಮಾಂಸಾಭಾಷ್ಯದಲ್ಲಿ ಇದನ್ನೇ ದೃಢೀಕರಿಸಿ ಬ್ರಹ್ಮಜಿಜ್ಞಾಸೆಗೆ ಬೇಕಾಗಿರುವುದು ಸಾಧನಚತುಷ್ಟಯವೊಂದೇ ಹೊರತು ಜಾತಿ ಮತ ಲಿಂಗ ವಯಸ್ಸು ಆಶ್ರಮ ಮುಂತಾದ ಯಾವುದರ ಅವಶ್ಯಕತೆಯೂ ಇಲ್ಲವೆಂಬುದಾಗಿ ಹೇಳಿರುತ್ತಾರೆ.

ಈಗ ಈ ಎಂಟು ಋಕ್ಕುಗಳ ತಾತ್ಪರ್ಯಾಂಶವನ್ನು ನೋಡೋಣ–

1. **ಅಹಂ ರುದ್ರೇಭಿಃ .. ..** ವಾಗಾಂಭ್ರಣೀಯಾದ ನಾನು ಪರಬ್ರಹ್ಮಸ್ವರೂಪಳೇ ಆಗಿದ್ದೇನೆ. ಏಕಾದಶರುದ್ರರೂಪದಿಂದ ಸಂಚರಿಸುತ್ತೇನೆ. ಅಷ್ಟವಸುಗಳ ಹಾಗೂ ದ್ವಾದಶಾದಿತ್ಯರ ರೂಪದಿಂದ ಸಂಚರಿಸುತ್ತೇನೆ. ಮಿತ್ರಾವರುಣರನ್ನೂ, ಇಂದ್ರಾಗ್ನಿಗಳನ್ನೂ, ಅಶ್ವಿನೀ ದೇವತೆಗಳನ್ನೂ ನಾನೇ ಭರಿಸಿ ಪೋಷಿಸುತ್ತೇನೆ.

2. **ಅಹಂ ಸೋಮಮಾಹನಸಮ್ .. ..** ದೇವತಾತ್ಮನಾದ ಸೋಮನನ್ನೂ, ತ್ವಷ್ಟೃ, ಪೂಷನ್, ಭಗ ಎಂಬ ದೇವತೆಗಳನ್ನೂ ನಾನೇ ಧರಿಸಿ ಪೋಷಿಸುತ್ತೇನೆ. ಸಿದ್ಧಪಡಿಸಿದ ಹವಿಸ್ಸನ್ನು ದೇವತೆಗಳಿಗೆ ಸಮರ್ಪಿಸುವವನೂ, ಅವರ ಪ್ರೀತ್ಯರ್ಥವಾಗಿ ಸೋಮರಸವನ್ನು ಹಿಂಡಿ ಅರ್ಪಿಸುವವನೂ ಆಗಿರುವ ಯಜ್ಞದ ಯಜಮಾನನಿಗೆ ನಾನೇ ಸಂಪತ್ತನ್ನೂ ಕೊಡುತ್ತೇನೆ. ಮೇಲಿನ ಎರಡು ಋಕ್ಕುಗಳ ತಾತ್ಪರ್ಯವನ್ನೇ ಭಗವದ್ಗೀತೆಯ ಹತ್ತನೆಯ ಅಧ್ಯಾಯವಾದ ವಿಭೂತಿಯೋಗದಲ್ಲಿ ಶ್ರೀಕೃಷ್ಣಪರಮಾತ್ಮನು ಅರ್ಜುನನಿಗೆ ತಿಳಿಸಿ ಹೇಳಿರುತ್ತಾನೆ.

3. **ಅಹಂ ರಾಷ್ಟ್ರೀ ಸಂಗಮನೀ .. ..** ನಾನು ನಾಮರೂಪಾತ್ಮಕವಾಗಿರುವ ಸಕಲಜಗತ್ತಿಗೂ ಕಾರಣವಾಗಿರುವ ಈಶ್ವರಿಯೇ ಆಗಿದ್ದೇನೆ. ನನ್ನ ಉಪಾಸಕರಿಗೆ ಸೇರಬೇಕಾದ ಸಕಲ ಸಂಪತ್ತೂ ನನ್ನಲ್ಲಿಯೇ ಸೇರಿಕೊಂಡಿದೆ. ನಾನು ಪರಬ್ರಹ್ಮದ ಸ್ವರೂಪವನ್ನು ಯಥಾವತ್ತಾಗಿ ಅನುಭವಕ್ಕೆ ತಂದುಕೊಂಡಿದ್ದೇನೆ. ಯಜ್ಞಕ್ಕೆ ಅರ್ಹರಾಗಿರುವ ದೇವತೆಗಳಲ್ಲಿ ಮುಖ್ಯನಾಗಿದ್ದೇನೆ. ಈ ವಿಶಿಷ್ಟಗುಣಗಳಿಂದ ಕೂಡಿರುವವಳೂ, ಸಮಸ್ತಪ್ರಪಂಚರೂಪದಲ್ಲಿರುವವಳೂ, ಎಲ್ಲ ಪ್ರಾಣಿಗಳ ಆತ್ಮಸ್ವರೂಪದಲ್ಲಿರುವವಳೂ ಆದ ನನ್ನನ್ನು ದೇವತೆಗಳು ಎಲ್ಲೆಲ್ಲೂ ಎಂದೆಂದೂ ಪೂಜಿಸುತ್ತಾರೆ. **'ತಸ್ಮಾದಾತ್ಮಜ್ಞಂ ಹ್ಯರ್ಚಯೇತ್ ಭೂತಿಕಾಮಃ'** ಎಂದು ಮುಂಡಕೋಪನಿಷತ್ತಿನಲ್ಲಿಯೂ ಹೇಳಿದೆ.

4. **ಮಯಾ ಸೋ ಅನ್ನಮತ್ತಿ .. ..** ತಿನ್ನುವುದು, ನೋಡುವುದು, ಉಸಿರುಬಿಡುವುದು, ಹೇಳಿದ್ದನ್ನು ಕಿವಿಯಿಂದ ಕೇಳುವುದು ಮುಂತಾದ ಜೀವಿಗಳ ಎಲ್ಲ ವ್ಯವಹಾರಗಳೂ ನನ್ನಿಂದಲೇ ನಡೆಯುತ್ತವೆ. ಸಕಲ ಭೂತಗಳಲ್ಲಿಯೂ ಅಂತರ್ಯಾಮಿಸ್ವರೂಪದಿಂದ ಇರುವ ಇಂತಹ ನನ್ನನ್ನು ಯಾರು ಯಥಾವತ್ತಾಗಿ ಅರಿಯುವುದಿಲ್ಲವೋ ಅವರು ಸಂಸಾರವೆಂಬ ಅಂಧಕಾರಕೂಪದಲ್ಲಿ ಬಿದ್ದು ನರಳುತ್ತಾರೆ. ಆದ್ದರಿಂದ ಎಲೈ ಪ್ರಿಯದರ್ಶನನೇ! ನಿನಗೆ ನಾನು ಹೇಳುವ ಈ ಮಾತುಗಳನ್ನು ಶ್ರದ್ಧೆಯಿಂದ ಕೇಳಿ ಕೃತಾರ್ಥನಾಗು.

5. **ಅಹಮೇವ ಸ್ವಯಮಿದಮ್ .. ..** ಆ ಪರಬ್ರಹ್ಮತತ್ತ್ವವೇ ನಾನಾಗಿದ್ದೇನೆಂದು ಸ್ವತಃ ನಾನೇ ಹೇಳುತ್ತೇನೆ. ಪರಬ್ರಹ್ಮತತ್ತ್ವವೇ ಎಲ್ಲರಿಂದಲೂ ಅರಿಯಲ್ಪಡತಕ್ಕದ್ದಾಗಿರುತ್ತದೆ. ನಾನು ಯಾರನ್ನು ಅನುಗ್ರಹಿಸಲು ಇಚ್ಛಿಸುತ್ತೇನೆಯೋ ಅವರನ್ನು ಎಲ್ಲರಿಗಿಂತಲೂ ಶ್ರೇಷ್ಠರನ್ನಾಗಿ ಮಾಡುತ್ತೇನೆ. ಅವರನ್ನು ಸೃಷ್ಟಿಕರ್ತನಾದ ಹಿರಣ್ಯಗರ್ಭನನ್ನಾಗಿಯೂ, ದಾರ್ಶನಿಕನನ್ನಾಗಿಯೂ, ಪ್ರಜ್ಞಾವಂತನನ್ನಾಗಿಯೂ ಮಾಡಬಲ್ಲೆನು. ಉಪನಿಷತ್ತುಗಳಲ್ಲಿಯೂ ಕೂಡ 'ಸೋಽನ್ವೇಷ್ಟವ್ಯಃ', 'ಸ ವಿಜಿಜ್ಞಾಸಿತವ್ಯಃ' 'ತದ್ವಿಜಿಜ್ಞಾಸಸ್ವ ತದ್ಬ್ರಹ್ಮೇತಿ' ಎಂದು ಮುಂತಾಗಿ ಹೇಳಿದೆ.

This content should not be copied/reproduced without the consent of Krishna Kamala Pathashaala

6. **ಅಹಂ ರುದ್ರಾಯ .. ..** ಬ್ರಹ್ಮಜ್ಞಾನಿಗಳನ್ನು ದ್ವೇಷಿಸುವ ತ್ರಿಪುರವಾಸಿಯಾದ ರಾಕ್ಷಸನನ್ನು ಸಂಹರಿಸುವುದಕ್ಕಾಗಿ ರುದ್ರನು ಪ್ರವೃತ್ತನಾದಾಗ, ಅವನ ಧನುಸ್ಸನ್ನು ನಾನೇ ಬಗ್ಗಿಸಿ ಹೆದೆಯೇರಿಸಿ ಸಜ್ಜುಗೊಳಿಸಿರುತ್ತೇನೆ. ನನ್ನನ್ನು ಸೇವಿಸುವವರ ರಕ್ಷಣೆಗಾಗಿ ನಾನೇ ಯುದ್ಧವನ್ನು ಮಾಡುತ್ತೇನೆ. ನಾನು ದ್ಯಾವಾಪೃಥಿವಿಗಳನ್ನೂ ಅನ್ತರ್ಯಾಮಿಯಾಗಿ ಪ್ರವೇಶಿಸಿರುತ್ತೇನೆ.

7. **ಅಹಂ ಸುವೇ .. ..** ನಾನು ಪಿತೃಭೂತವಾದ ಸ್ವರ್ಗವನ್ನು (ದ್ಯೌಃ ಪಿತಾ, ದ್ಯೌರಸ್ತು ನಃ ಪಿತಾ) ಈ ಸೃಷ್ಟಿಕರ್ತನ ಶಿರಸ್ಸಿನಲ್ಲಿ ಮೇಲುಭಾಗದಲ್ಲಿ ಉಂಟುಮಾಡುತ್ತೇನೆ. ನನ್ನ ಕಾರಣಭೂತವಾದ ಸ್ಥಾನವು **'ಸಮುದ್ರೇ'** ಅಂದರೆ ಪರಮಾತ್ಮಸಂಬಂಧವಾದ ಬುದ್ಧಿವ್ಯಾಪಾರಗಳಲ್ಲಿ ಸೇರಿಹೋಗಿದೆ. ಪರಮಾತ್ಮನ ಬುದ್ಧಿಯೇ ಈ ಸಕಲಸೃಷ್ಟಿಗೂ ಕಾರಣವಾಗಿರುವುದು. ಆದ್ದರಿಂದ ನಾನು ಸಮಸ್ತ ಜೀವರಾಶಿಗಳಲ್ಲಿಯೂ ಅಂತರ್ಯಾಮಿಯಾಗಿ ಪ್ರವೇಶಿಸಿ ನಾನಾವಿಧವಾದ ನಾಮರೂಪಗಳಿಂದ ತೋರಿಕೊಳ್ಳುತ್ತಿದ್ದೇನೆ. ಎಲ್ಲಕ್ಕಿಂತ ಮೇಲೆ ಇರುವ ಸ್ವರ್ಗವೇ ಮುಂತಾದ ಲೋಕಗಳನ್ನೂ ಸಹ ನನ್ನ ಮಾಯಾರೂಪವಾದ ಶರೀರದಿಂದ ಸ್ಪರ್ಶಿಸುತ್ತೇನೆ. ಇದರಿಂದ ಪರಮಾತ್ಮನಿಗೆ ಕರ್ತೃತ್ವವು ನಿಜವಾಗಿ ಇರುವುದಿಲ್ಲ ಅವನು ಅಕರ್ತೃವೇ ಆಗಿದ್ದಾನೆ ಎನ್ನುವುದು ಸೂಚಿತವಾಗಿದೆ.

8. **ಅಹಮೇವ ವಾತ ಇವ .. ..** ಸ್ವತನ್ತ್ರವಾಗಿ ಸ್ವೇಚ್ಛೆಯಿಂದ ಬೀಸುವ ಗಾಳಿಯಂತೆ ಸಮಸ್ತಲೋಕಗಳನ್ನೂ, ಅಲ್ಲಿರುವ ಪ್ರಾಣಿಗಳನ್ನೂ ಬೇರೆ ಯಾವ ಉಪಾದಾನವನ್ನೂ ಬಯಸದೆ ಉತ್ಪತ್ತಿಮಾಡುತ್ತಾ, ನಾನು ಮಾತ್ರ ಯಾವ ವಿಕಾರಗಳಿಗೂ ಒಳಗಾಗದೆ ನಿರ್ವಿಕಾರದಿಂದಿರುತ್ತೇನೆ. **'ಅತ್ಯತಿಷ್ಠದ್ದಶಾಙ್ಗುಲಮ್'** ಎಂಬಂತೆ ದ್ಯಾವಾಪೃಥಿವಿಗಳನ್ನು ನನ್ನ ವಿಭೂತಿಯಿಂದ ವ್ಯಾಪಿಸಿರುವ ನಾನು ಕಾಲಾತೀತನಾಗಿ ಎಲ್ಲಕಡೆಯಲ್ಲಿಯೂ ಇರುತ್ತೇನೆ. ಇಲ್ಲಿ 'ಯಾವ ಉಪಾದಾನವನ್ನೂ ಬಯಸದೆ' ಎಂದು ಹೇಳಿರುವುದರಿಂದ ಪರಮಾತ್ಮನು **ಅಧ್ಯಾರೋಪದೃಷ್ಟಿಯಿಂದ** ಈ ಜಗತ್ತಿಗೆ ಕೇವಲ ನಿಮಿತ್ತಕಾರಣನೇ ಅಲ್ಲ, ಉಪಾದಾನಕಾರಣವೂ ಆಗಿದ್ದಾನೆ ಎನ್ನುವುದು ತಿಳಿದುಬರುತ್ತದೆ.

ಹೀಗೆ ಉಪನಿಷತ್ತುಗಳ ಪರಮಸಿದ್ಧಾನ್ತವನ್ನೇ ಹೇಳುತ್ತಿರುವ ಈ ಸೂಕ್ತವು ಪಠನಯೋಗ್ಯವೂ ಮನನಯೋಗ್ಯವೂ ಆಗಿರುತ್ತದೆ.

This content should not be copied/reproduced without the consent of Krishna Kamala Pathashaala

ಶ್ರೀವಾಲ್ಮೀಕಿಮುನಿವಿರಚಿತ ಶ್ರೀಮದ್ರಾಮಾಯಣಮಹಾಕಾವ್ಯದಲ್ಲಿ

ಉತ್ತರಕಾಂಡದ ಕಥೆಗಳು

ವಿದ್ವಾನ್ ಡಾ॥ ಸತ್ಯನಾರಾಯಣ ತಲಕಾಡು

M.A. P.Hd.,

ನಿವೃತ್ತ ಉಪನಿರ್ದೇಶಕರು ಹಾಗೂ ಗೌರವ ಸಲಹಾಗಾರರು

ಪ್ರಾಚ್ಯವಿದ್ಯಾಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.

ಮೊದಲನೆಯ ಸರ್ಗ

[ಪಟ್ಟಾಭಿಷಿಕ್ತನಾಗಿ ಅಯೋಧ್ಯೆಯ ರಾಜಸಿಂಹಾಸನದಲ್ಲಿ ಕುಳಿತು ರಾಜ್ಯಶಾಸನವನ್ನು ಮಾಡುತ್ತಿರುವ ಶ್ರೀರಾಮನನ್ನು ಗೌರವಿಸಿ ಅಭಿನಂದಿಸಲು ಮಹರ್ಷಿಗಳು ಬಂದುದು – ಅವರೊಡನೆ ಶ್ರೀರಾಮನ ಕುಶಲಪ್ರಶ್ನೆ ಹಾಗೂ ಅಮೂಲ್ಯಪ್ರಶ್ನೆಗಳು]

ಪ್ರಾಪ್ತರಾಜ್ಯಸ್ಯ ರಾಮಸ್ಯ ರಾಕ್ಷಸಾನಾಂ ವಧೇ ಕೃತೇ ।
ಆಜಗ್ಮುಃ ಋಷಯಃ ಸರ್ವೇ ರಾಘವಂ ಪ್ರತಿನನ್ದಿತುಮ್ ॥

(ವಾ.ರಾ. ಉ.ಕಾಂ. 1–1)

ಅಯೋಧ್ಯೆಯ ರಾಜಸಿಂಹಾಸನದಲ್ಲಿ ದಶರಥನ ಮಗ ಶ್ರೀರಾಮನು ಪಟ್ಟಾಭಿಷಿಕ್ತನಾಗಿ ಧರ್ಮದಿಂದ ರಾಜ್ಯಭಾರವನ್ನು ಮಾಡಲು ತೊಡಗಿದನು. ಧರ್ಮಶಾಸಕನಾದ ಶ್ರೀರಾಮನನ್ನು ಗೌರವಿಸಿ ಅಭಿನಂದಿಸಬೇಕೆಂಬ ಆಸೆಯಿಂದ ಬೇರೆಬೇರೆ ಕಡೆಗಳ ಋಷ್ಯಾಶ್ರಮಗಳಲ್ಲಿ ವಾಸಮಾಡುತ್ತಿದ್ದ ಎಲ್ಲ ಮುನಿಗಳು ಅಯೋಧ್ಯಾಪಟ್ಟಣಕ್ಕೆ ಬಂದರು. ಅವರಲ್ಲಿ ಪ್ರಮುಖವಾಗಿ ಪೂರ್ವದಿಕ್ಕಿನ ತಪೋವನಗಳಲ್ಲಿ ವಾಸಿಸುತ್ತಿದ್ದ ಕೌಶಿಕ, ಯವಕ್ರೀತ, ಗಾರ್ಗ್ಯ, ಗಾಲವ, ಮೇಧಾತಿಥಿಯ ಮಗ ಕಣ್ವರು. ದಕ್ಷಿಣದ ಕಡೆಯಲ್ಲಿದ್ದ ಸ್ವಸ್ತ್ಯಾತ್ರೇಯ, ನಮುಚಿ, ಪ್ರಮುಚಿ, ಅಗಸ್ತ್ಯ, ಅತ್ರಿ, ಸುಮುಖ, ವಿಮುಖರು. ಪಶ್ಚಿಮದಿಕ್ಕಿನ ಋಷ್ಯಾಶ್ರಮಗಳಿಂದ, ನೃಷದ್ಗು, ಕವಷ, ಧೌಮ್ಯ, ಕೌಶೇಯರು ಹಾಗೆಯೇ ಇನ್ನೂ ಅನೇಕಜನ ಮುನಿಗಳು ಅಯೋಧ್ಯಾನಗರಕ್ಕೆ ಬಂದರು. ಉತ್ತರದಿಕ್ಕಿನ ಅನೇಕಕಡೆ ಋಷ್ಯಾಶ್ರಮಗಳಲ್ಲಿ ನೆಲೆಸಿದ್ದ ವಸಿಷ್ಠ, ಕಶ್ಯಪ, ಅತ್ರಿ, ವಿಶ್ವಾಮಿತ್ರ, ಗೌತಮ, ಜಮದಗ್ನಿ, ಭರದ್ವಾಜರೆಂಬ ಸಪ್ತರ್ಷಿಗಳು ಬಂದರು. ಈ ಋಷಿಗಳ ಸಮಸ್ತಗುಂಪುಗಳಲ್ಲಿ ಒಂದೇ ಹೆಸರಿನ ಅನೇಕ ಋಷಿಗಳಿದ್ದರೆನ್ನುವುದು ಗಮನಾರ್ಹ. ಇವರೆಲ್ಲರೂ ಹೊಳೆಯುವ ಅಗ್ನಿಗೆ ಸಮಾನರಾಗಿ ಪ್ರಖರತೇಜಸ್ಸಿನಿಂದ ಬೆಳಗುತ್ತಿದ್ದರು. ನಾಲ್ಕು ವೇದಗಳಲ್ಲಿ, ಆರು ವೇದಾಂಗಗಳಲ್ಲಿ, ಆರು ಶಾಸ್ತ್ರಗಳಲ್ಲಿ, ದರ್ಶನಗಳಲ್ಲಿ ಹಾಗೂ ಇತರ ಎಲ್ಲ ಬಗೆಯ ಶಾಸ್ತ್ರಗಳಲ್ಲಿ ಇವರೆಲ್ಲರೂ ಬಲ್ಲಿದರಾಗಿದ್ದರು. ಜ್ಞಾನನಿಧಿಗಳಾದ ಮರ್ಷಿಗಳೆಲ್ಲರೂ ಒಟ್ಟಾಗಿ ಒಂದೆಡೆ ಸೇರುವುದೇ ಒಂದು ಪುಣ್ಯವಿಶೇಷ. ಮಹಿಮಾನ್ವಿತರಾದ ಈ ಮುನಿಗಳೆಲ್ಲರೂ ಶ್ರೀರಾಮನ ಅರಮನೆಯ ಒಳಗೆ

This content should not be copied/reproduced without the consent of Krishna Kamala Pathashaala

ಬಂದು, ತಾವು ಬಂದಿರುವ ವಿಷಯವನ್ನು ತಿಳಿಸುವುದಕ್ಕಾಗಿ ಅರಮನೆಯ ರಾಜದ್ವಾರದ ಬಳಿಗೆ ಬಂದರು. ಮುನಿಗಳಲ್ಲಿ ಸರ್ವಮಾನ್ಯರಾಗಿದ್ದ ಅಗಸ್ತ್ಯರು ರಾಜದ್ವಾರದಲ್ಲಿ ದ್ವಾರಪಾಲಕನಿಗೆ "ಎಲೈ ದ್ವಾರಪಾಲಕನೇ! ಅಯೋಧ್ಯಾಪತಿ ಶ್ರೀರಾಮನನ್ನು ನೋಡಿ ಅವನೊಡನೆ ಮಾತನಾಡಿಕೊಂಡು ಹೋಗಲು ನಾವೆಲ್ಲರೂ ಬಂದಿದ್ದೇವೆ. ಈ ವಿಷಯವನ್ನು ರಾಜನಾದ ಶ್ರೀರಾಮನಿಗೆ ನೀನು ಅರಿಕೆಮಾಡು" ಎಂದು ಹೇಳಿದರು. ರಾಜನೀತಿಜ್ಞನಾಗಿದ್ದ, ನೋಡಿದಕೂಡಲೇ ಬೇರೆಯವರ ಮನೋಗತಅಭಿಪ್ರಾಯವನ್ನು ಅರಿಯುವುದರಲ್ಲಿ ಚತುರನಾದ, ಸದಾಚಾರಿಯಾದ, ಧೈರ್ಯವಂತನಾದ ಆ ದ್ವಾರಪಾಲಕನು ಹುಣ್ಣಿಮೆಯ ಚಂದ್ರನ ಕಾನ್ತಿಯಂತೆ ಬೆಳಗುತ್ತಿದ್ದ ಶ್ರೀರಾಮನ ಬಳಿಗೆ ಹೋಗಿ ನಮಸ್ಕರಿಸಿ, ಮಹರ್ಷಿಗಳು ಬಂದಿರುವ ವಿಷಯವನ್ನು ಅವನಿಗೆ ಹೇಳಿದನು. ಅವನ ಮಾತುಗಳನ್ನು ಕೇಳಿದಕೂಡಲೇ ಶ್ರೀರಾಮನು ತುಂಬಾ ಸಂತೋಷಪಟ್ಟು ಅವರೆಲ್ಲರನ್ನೂ ಒಳಗೆ ಕರೆತರಲು ಹೇಳಿದನು. ದ್ವಾರಪಾಲಕನು ಕೂಡಲೇ ಎಲ್ಲ ಪೂಜ್ಯಮಹರ್ಷಿಗಳನ್ನು ಶ್ರೀರಾಮನ ಬಳಿಗೆ ಕರೆತಂದನು.

ತನ್ನ ಬಳಿ ಬಂದ ಮಹರ್ಷಿಗಳೆಲ್ಲರನ್ನೂ ಕಂಡ ಶ್ರೀರಾಮನು ಕೂಡಲೇ ಸಿಂಹಾಸನದಿಂದ ಮೇಲೆದ್ದು, ಕೆಳಗಿಳಿದು ಬಂದು ಕೈಮುಗಿದುಕೊಂಡು ಅವರೆಲ್ಲರನ್ನೂ ನಮಸ್ಕರಿಸಿ, ಅವರನ್ನು ಬನ್ನಿರೆಂದು ಹೃದಯಪೂರ್ವಕವಾಗಿ ಅಹ್ವಾನಿಸಿ, ಅವರಿಗೆ ಪಾದ್ಯ, ಅರ್ಘ್ಯ, ಆಚಮನೀಯ, ಮಧುಪರ್ಕಗಳನ್ನು ನೀಡಿ ಗೌರವಿಸಿ ಪವಿತ್ರವಾದ ಹಸುಗಳನ್ನು ನೀಡಿ ಸತ್ಕಾರಮಾಡಿದನು.

ತಾನ್ ಸಂಪ್ರಾಪ್ತಾನ್ ಮುನೀನ್ ದೃಷ್ಟ್ವಾ ಪ್ರತ್ಯುತ್ಥಾಯ ಕೃತಾಞ್ಜಲಿಃ ।
ಪಾದ್ಯಾರ್ಘ್ಯಾದಿಭಿರಾನರ್ಚ್ಯ ಗಾಂ ನಿವೇದ್ಯ ಚ ಸಾದರಮ್ ॥

(ವಾ.ರಾ. ಉ.ಕಾಂ. 1–11)

ನಂತರ ಅವರೆಲ್ಲರಿಗೂ ಕುಳಿತುಕೊಳ್ಳಲು ಉಚಿತವಾದ ಆಸನಗಳನ್ನು ನೀಡಿದನು. ಆ ಆಸನಗಳೆಲ್ಲವೂ ಸುವರ್ಣಮಯ ಆಸನಗಳಾಗಿದ್ದುವು. ಕುಸುರಿಕೆತ್ತನೆಯ ಕೆಲಸಗಳನ್ನು ಅವುಗಳಿಗೆ ಮಾಡಿದ್ದರು. ಅವು ವಿಶಾಲವಾಗಿಯೂ, ಎತ್ತರವಾಗಿಯೂ, ಮನೋಹರವಾಗಿಯೂ ಇದ್ದು ಕುಳಿತುಕೊಳ್ಳಲು ತುಂಬಾ ಅನುಕೂಲವಾಗಿದ್ದವು. ಆಸನಗಳಮೇಲೆ ದರ್ಭೆಗಳನ್ನು ಹರಡಿ ಜಿಂಕೆಯ ಚರ್ಮಗಳನ್ನು ಹಾಕಿದ್ದರು. ಅಂತಹ ಸುಖಾಸನಗಳಲ್ಲಿ ಋಷಿಗಳೆಲ್ಲರೂ ಕುಳಿತುಕೊಂಡು ಒಟ್ಟಾಗಿ ಶ್ರೀರಾಮನಿಗೆ ಈ ರೀತಿ ಹೇಳಲು ಪ್ರಾರಂಭಿಸಿದರು.

ರಾಮೇಣ ಕುಶಲಂ ಪೃಷ್ಟಾಃ ಸಶಿಷ್ಯಾಃ ಸುಪುರೋಗಮಾಃ ।
ಮಹರ್ಷಯೋ ವೇದವಿದೋ ರಾಮಂ ವಚನಮಬ್ರುವನ್ ॥

(ವಾ.ರಾ. ಉ.ಕಾಂ. 1–13)

"ಧರ್ಮಾತ್ಮನಾದ ರಘುಕುಲತಿಲಕ ಶ್ರೀರಾಮನೇ! ನಿನಗೆ ಮಂಗಳವಾಗಲಿ. ನಾವೆಲ್ಲರೂ ಕ್ಷೇಮದಿಂದ ಇದ್ದೇವೆ. ನೀನು ಮತ್ತು ನಿನ್ನವರೆಲ್ಲರೂ ಕುಶಲವಾಗಿದ್ದೀರೆಂದು ಭಾವಿಸಿದ್ದೇವೆ. ಅದೃಷ್ಟವಶಾತ್ ನಾವೆಲ್ಲರೂ, ಲೋಕಕಂಟಕರಾಗಿದ್ದ ಎಲ್ಲ ಶತ್ರುಗಳನ್ನೂ ಕೊಂದು ಸುಖದಿಂದಿರುವ ನಿನ್ನನ್ನು ನೋಡುತ್ತಿದ್ದೇವೆ ಎಂದರೆ

This content should not be copied/reproduced without the consent of Krishna Kamala Pathashaala

ನಾವೆಲ್ಲರೂ ಭಾಗ್ಯಶಾಲಿಗಳೆಂದೇ ತಿಳಿಯುತ್ತೇವೆ. ವಿಶೇಷವಾಗಿ ಲೋಕದ ಜನರೆಲ್ಲರ ಪೀಡಕನಾಗಿದ್ದ ದಶಮುಖರಾವಣನನ್ನು ಅವನ ಮಕ್ಕಳು, ಮೊಮ್ಮಕ್ಕಳು ಸೇನಾಪತಿಗಳ ಸಹಿತವಾಗಿ ಕೊಲ್ಲುವುದು ನಿನಗೇನೂ ದೊಡ್ಡಕೆಲಸವಾಗಿರಲಿಲ್ಲ. ಏಕೆಂದರೆ ನೀನು ಮಹಾನ್ ಬಲಶಾಲಿ. ಬಿಲ್ಲು ಬಾಣಗಳನ್ನು ಹಿಡಿದು ನೀನು ಮೂರು ಲೋಕಗಳನ್ನೂ ಒಬ್ಬಂಟಿಯಾಗಿ ಹೋರಾಡಿ ಗೆಲ್ಲಬಲ್ಲೆ. ಅಂತಹ ವೀರ ನೀನು. ಅಜೇಯ ನೀನು. ಎಲ್ಲರ ಪುಣ್ಯದಿಂದ ನೀನು ಲಂಕಾಧಿಪತಿ ರಾವಣನನ್ನು ಸಮೂಲವಾಗಿ ಸಂಹರಿಸಿ, ಪತಿವ್ರತಾ ಶಿರೋಮಣಿಯಾದ ನಿನ್ನ ಹೆಂಡತಿ ಸೀತೆಯನ್ನು ಪಡೆದು ಈಗ ಇಲ್ಲಿ ಪಟ್ಟಾಭಿಷಿಕ್ತನಾಗಿರುವುದನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ. ಇದು ನಮ್ಮ ಭಾಗ್ಯವಿಶೇಷವಾಗಿದೆ. ಎಲೈ ಶ್ರೀರಾಮ! ನಿನ್ನ ತಮ್ಮಂದಿರಾದ ಲಕ್ಷ್ಮಣ, ಭರತ, ಶತ್ರುಘ್ನರು ಸದಾ ನಿನ್ನ ಜೊತೆಯಲ್ಲಿದ್ದು ನಿನ್ನ ಹಿತವನ್ನು, ಲೋಕದ ಹಿತವನ್ನು ಬಯಸತಕ್ಕವರಾಗಿ, ನಿನಗೆ ಸಹಕಾರಿಗಳಾಗಿ ನಿನಗೆ ಬಲವನ್ನು ತುಂಬಿದ್ದಾರೆ. ಕೌಸಲ್ಯಾ, ಸುಮಿತ್ರಾ ಕೈಕೇಯೀ ಮೊದಲಾದ ತಾಯಂದಿರೊಡನೆ. ಆಪ್ತರೊಡನೆ, ಗೆಳೆಯರೊಡನೆ, ನಿಷ್ಠಾವಂತಪರಿವಾರದವರೊಡನೆ ಸುಖಸಂತೋಷದಿಂದಿರುವ ನಿನ್ನನ್ನು ನೋಡಿ ನಮಗೆ ತುಂಬಾ ಸಂತೋಷವಾಗಿದೆ. ಪ್ರಜಾಹಿತಕಾರಿಯಾದ ನಿನ್ನ ದರ್ಶನವು ನಮಗಾಗಿರುವುದು ನಮ್ಮ ಪುಣ್ಯವಾಗಿದೆ.

ಎಲೈ ಶ್ರೀರಾಮ! ಬಲಿಷ್ಠರಾದ ಪ್ರಹಸ್ತ, ವಿಕಟ, ವಿರೂಪಾಕ್ಷ, ಮಹೋದರ, ದುರ್ಧರ್ಷ, ಅಕಂಪನ ಇನ್ನೂ ಮೊದಲಾದ ಅನೇಕ ರಾಕ್ಷಸರನ್ನು ನೀನು ಕೊಂದೆ. ಲೋಕದಲ್ಲಿ ಯಾವ ವ್ಯಕ್ತಿಗೂ ಇಲ್ಲದ ಬೃಹತ್ತಾದ ಶರೀರವನ್ನು ಹೊಂದಿದ್ದ, ಪರ್ವತದಂತೆ ಅಧೃಶ್ಯನಾಗಿದ್ದ ರಾಕ್ಷಸ ಕುಂಭಕರ್ಣನನ್ನು ನೀನು ಸಂಹರಿಸಿದೆ. ತ್ರಿಶಿರಸ್, ಅತಿಕಾಯ, ದೇವಾಂತಕ, ನರಾಂತಕ ಮುಂತಾದ ಅತಿಬಲರಾದ ರಾಕ್ಷಸರನ್ನು ನೀನು ಕೊಂದುಹಾಕಿದೆ. ಕುಂಭಕರ್ಣನ ಮಕ್ಕಳಾದ ಮಹಾಭಯಂಕರರಾಗಿದ್ದ ಕುಂಭ, ನಿಕುಂಭರನ್ನೂ, ಪ್ರಲಯಕಾಲದ ಯಮನಂತೆ ಇದ್ದ ಯುದ್ಧೋನ್ಮತ್ತ, ಮತ್ತ ಎಂಬಿಬ್ಬರನ್ನು, ಯಜ್ಞಕೋಪ, ಧೂಮ್ರಾಕ್ಷ- ಮೊದಲಾದ ಅನೇಕ ಮಹಾನ್ ಬಲಿಷ್ಠರಾದ ರಾಕ್ಷಸರನ್ನು, ಅವರು ಮೇಲೆಸೆದ ಶಸ್ತ್ರಾಸ್ತ್ರಗಳನ್ನೆಲ್ಲಾ ನಾಶಮಾಡಿ ಅವರೆಲ್ಲರನ್ನೂ ನಿರ್ದಾಕ್ಷಿಣ್ಯವಾಗಿ ಕೊಂದುಹಾಕಿದೆ. ಇವೆಲ್ಲ ಸಾಮಾನ್ಯಕಾರ್ಯಗಳಲ್ಲ. ದೇವಾಧಿದೇವತೆಗಳನ್ನೆಲ್ಲಾ ಗೆದ್ದು ಸ್ವರ್ಗ-ಮರ್ತ್ಯ-ಪಾತಾಳಲೋಕಗಳನ್ನೆಲ್ಲವನ್ನೂ ತನ್ನ ಅಧೀನದಲ್ಲಿಟ್ಟುಕೊಂಡು ತ್ರಿಲೋಕಾಧಿಪತಿಯಾಗಿದ್ದ ದಶಕಂಠರಾವಣನ ಜೊತೆ ನೀನು ಬಾಹುಯುದ್ಧವನ್ನು ಮಾಡಿದೆ. ದ್ವಂದ್ವಯುದ್ಧಮಾಡಿದೆ. ಅವನು ಪ್ರಯೋಗಿಸಿದ ಅನುಪಮವಾದ ಶಸ್ತ್ರಾಸ್ತ್ರಗಳನ್ನೆಲ್ಲ ನೀನು ನಿನ್ನ ಪ್ರಖರವಾದ ಶಸ್ತ್ರಾಸ್ತ್ರಗಳಿಂದ ನಾಶಮಾಡಿ ಕೊಂದುಹಾಕಿದ್ದಂತೂ ಅದ್ಭುತವಾದ ಕಾರ್ಯವೇ ಆಗಿದೆ. ಕಾಲಪುರುಷನಂತೆ ಹೋರಾಡಲು ಬಂದು ಮರೆಯಾಗಿ ಎಲ್ಲಕಡೆ ಓಡಾಡುತ್ತಾ, ನಿಮ್ಮೊಡನೆ ಯುದ್ಧಮಾಡುತ್ತಾ ಅಜೇಯರಾಗಿದ್ದ, ದೇವತೆಗಳ ಶತ್ರುವಾದ ರಾವಣನ ಮಗ ಇಂದ್ರಜಿತ್ತುವು ನಿಮ್ಮೆಲ್ಲರನ್ನೂ ನಾಗಪಾಶದಿಂದ ಬಂಧಿಸಿಬಿಟ್ಟನು. ಆಗ ನೀವೆಲ್ಲರೂ ಚತುರತೆಯಿಂದ ನಾಗಪಾಶದಿಂದ ಬಿಡಿಸಿಕೊಂಡು ಮತ್ತೆ ಅವನೊಡನೆ ಹೋರಾಡಿದಿರಿ. ವಿಶೇಷವಾಗಿ ಇಂತಹ ಶತ್ರುಭಯಂಕರನಾಗಿದ್ದ, ಅಪ್ರತಿಹತಶೂರನಾಗಿದ್ದ ಇಂದ್ರಜಿತ್‌ನನ್ನು ನಿನ್ನ ತಮ್ಮನಾದ ಸುಮಿತ್ರಾಸುತಲಕ್ಷ್ಮಣನು ಕೊಂದುಹಾಕಿದನು ಎಂಬುದು ಸಾಮಾನ್ಯವಾದ ವಿಷಯವೇನಲ್ಲ. ಏಕೆಂದರೆ ಇಂದ್ರಜಿತ್ತುವನ್ನು ಕೊಲ್ಲಲು ಯಾರಿಂದಲೂ ಸಾಧ್ಯವಿರಲಿಲ್ಲ. ಅವನು ಯುದ್ಧಕುಶಲಿಯಾಗಿದ್ದನು. ಮಾಯಾಯುದ್ಧವನ್ನು ಮಾಡುವುದರಲ್ಲಿ ಅತಿನಿಪುಣನಾಗಿದ್ದನು. ಯುದ್ಧತಂತ್ರಗಳನ್ನೆಲ್ಲವನ್ನೂ ಬಲ್ಲ ರಣವೀರನಾಗಿದ್ದನು ಇಂದ್ರಜಿತ್ತು. ಅಂತಹ ಶಕ್ತಿಶಾಲಿಯಾದ ಇಂದ್ರಜಿತ್ತುವನ್ನು ಕೊಲ್ಲುವುದು ಸಾಮಾನ್ಯಸಂಗತಿಯೇನಲ್ಲ. ನಿನ್ನ ತಮ್ಮನಾದ ಲಕ್ಷ್ಮಣನು ರಾವಣನ ಮಗ ಇಂದ್ರಜಿತ್ತುವನ್ನು ಕೊಂದುಹಾಕಿದನೆಂಬ ಅದ್ಭುತವಾದ ವಿಚಾರವನ್ನು ಕೇಳಿದಾಗ ನಾವೆಲ್ಲರೂ

This content should not be copied/reproduced without the consent of Krishna Kamala Pathashaala

ಸ್ತಂಭೀಭೂತರಾದೆವು, ಆಶ್ಚರ್ಯಪಟ್ಟೆವು. ಮೇಘನಾದ ಇಂದ್ರಜಿತ್ತುವನ್ನು ಲಕ್ಷ್ಮಣನು ಕೊಂದುದು ಮಹದದ್ಭುತವಾದ ಕಾರ್ಯವೇ ಸರಿ. ದುಷ್ಟರಾಕ್ಷಸರಾದ ರಾವಣ, ಕುಂಭಕರ್ಣ, ಇಂದ್ರಜಿತ್ ಮೊದಲಾದ ಮಹಾದೈತ್ಯರಾದ ಶತ್ರುಗಳನ್ನು ಕೊಂದು ಲೋಕಕ್ಕೆ ಉಪಕಾರಮಾಡಿದ ನಿನ್ನನ್ನು, ನಿನ್ನ ತಮ್ಮನಾದ ಲಕ್ಷ್ಮಣನನ್ನು, ನಿನ್ನ ಜೊತೆ ಇದ್ದು ರಾಕ್ಷಸರೊಡನೆ ಹೋರಾಡಿದ ಸುಗ್ರೀವ, ಹನುಮಂತ, ಅಂಗದ, ಸುಷೇಣ ಮೊದಲಾದ ಕಪಿವೀರರನ್ನು ಹಾಗೂ ನಿನ್ನ ಜೊತೆ ಸೇರಿ ನಿನಗೆ ಸದಾಕಾಲ ಒತ್ತಾಸೆಯಾಗಿದ್ದು ರಾವಣಾದಿಗಳನ್ನು ಕೊಲ್ಲಲು ಸಹಕರಿಸಿದ ವಿಭೀಷಣ ಮೊದಲಾದ ರಾಕ್ಷಸವೀರರನ್ನು ನಾವೆಲ್ಲರೂ ಅಭಿನಂದಿಸುತ್ತೇವೆ, ಪ್ರಶಂಸಿಸುತ್ತೇವೆ, ಗೌರವಿಸುತ್ತೇವೆ.

ಎಲೈ ರಘುವಂಶದಿನಮಣಿಯಾದ ರಾಮಚಂದ್ರನೇ! ರಾವಣಾದಿರಾಕ್ಷಸರ ಜೊತೆಜೊತೆಯಲ್ಲಿಯೇ ದಂಡಕಾರಣ್ಯ ಮೊದಲಾದೆಡೆ ನೆಲೆಸಿದ್ದು ಲೋಕಕಂಟಕರಾಗಿದ್ದ ಖರದೂಷಣ, ತ್ರಿಶಿರಸ್ಸು ಮೊದಲಾದ ಕಾಮರೂಪಿಗಳಾಗಿದ್ದ ಅನೇಕ ರಾಕ್ಷಸರನ್ನು ನೀನು ಕೊಂದು ಲೋಕದ ಪ್ರಜಾಸಮುದಾಯವನ್ನು ಕಾಪಾಡಿದ್ದೀಯೆ. ಲಕ್ಷ್ಮಣನಿಂದ ಆದ ಇಂದ್ರಜಿತ್ತುವಿನ ವಧೆಯಂತೂ ನೀನು ಲೋಕಕ್ಕೆ ನೀಡಿದ ಅಭಯದಾನ. ಶತ್ರುಹಂತಕನಾದ ನಿನ್ನನ್ನೂ, ನಿನ್ನ ತಮ್ಮ ಲಕ್ಷ್ಮಣನನ್ನೂ ನಾವು ಅಭಿನಂದಿಸುತ್ತೇವೆ, ಆಶೀರ್ವದಿಸುತ್ತೇವೆ. ನೀನು ಜಯಶಾಲಿಯಾಗು. ನಿನಗೆ ಸಕಲಮಂಗಳಗಳೂ ಉಂಟಾಗಲಿ. ಶುಭವಾಗಲಿ'' ಎಂದು ಮಹರ್ಷಿಗಳೆಲ್ಲರೂ ಮುಕ್ತಕಂಠದಿಂದ ಹೊಗಳಿ, ಅಭಿನಂದಿಸಿ ಆಶೀರ್ವದಿಸಿದರು.

ದತ್ವಾ ಪುಣ್ಯಮಿಮಾಂ ವೀರ ಸೌಮ್ಯಾಮಭಯದಕ್ಷಿಣಾಮ್ ।
ದಿಷ್ಟ್ಯಾ ವರ್ಧಸಿ ಕಾಕುತ್ಸ್ಥ ಜಯೇನಾಮಿತ್ರಕರ್ಶನ ॥

(ವಾ.ರಾ. ಉ.ಕಾಂ. 1–33)

ಪವಿತ್ರಾತ್ಮರಾದ ಮಹರ್ಷಿಗಳೆಲ್ಲರ ವಿಶ್ವಾಸಪೂರ್ವಕವಾದ ಮಾತುಗಳನ್ನು ಕೇಳಿದ ಶ್ರೀರಾಮನು ತುಂಬಾ ಸಂತೋಷಗೊಂಡನು. ನಿರೀಹರೂ ತಪೋನಿಧಿಗಳೂ ಆದ ಮುನಿಗಳು ತನ್ನನ್ನು ಪ್ರಶಂಸಿಸಿ, ಅಭಿನಂದಿಸಿ ಆಶೀರ್ವದಿಸಿದುದು ಶ್ರೀರಾಮನಿಗೆ ಧನ್ಯತೆಯನ್ನು ಉಂಟುಮಾಡಿತು. ಶ್ರೀರಾಮನು ತನ್ನನ್ನು ಆಶೀರ್ವದಿಸಿದ ಮಹರ್ಷಿಗಳೆಲ್ಲರಿಗೂ ನಮಸ್ಕಾರಮಾಡಿ ಈ ರೀತಿ ಹೇಳತೊಡಗಿದನು–

ಶ್ರುತ್ವಾ ತು ವಚನಂ ತೇಷಾಂ ಮುನೀನಾಂ ಭಾವಿತಾತ್ಮನಾಮ್ ।
ವಿಸ್ಮಯಂ ಪರಮಂ ಗತ್ವಾ ರಾಮಃ ಪ್ರಾಞ್ಜಲಿರಬ್ರವೀತ್ ॥

(ವಾ.ರಾ. ಉ.ಕಾಂ. 1–37)

''ಪೂಜ್ಯರೂ ಮಹಿಮಾನ್ವಿತರೂ ಆಗಿರುವ ಮಹರ್ಷಿಗಳೇ! ನೀವೆಲ್ಲರೂ ತುಂಬು ಹೃದಯದಿಂದ ನನ್ನನ್ನು ಹೊಗಳಿ, ಗೌರವಿಸಿ, ಆಶೀರ್ವದಿಸಿದುದು ನನಗೆ ಬಹಳ ಆನಂದವನ್ನು ಕೊಟ್ಟಿದೆ. ನಾನು ಧನ್ಯನಾದೆ, ಕೃತಾರ್ಥನಾದೆ. ಪೂಜ್ಯರಾದ ಮುನಿಗಳೇ! ಕುಂಭಕರ್ಣ, ರಾವಣ ಈ ಇಬ್ಬರು ರಾಕ್ಷಸಸಹೋದರರು ದೊಡ್ಡವೀರರೇ, ಆದರೂ ನೀವೆಲ್ಲರೂ ರಾವಣನ ಮಗ ಇಂದ್ರಜಿತ್ತುವನ್ನು ನಾನು ಕೊಂದದ್ದು ಕುಂಭಕರ್ಣ ರಾವಣರನ್ನು ಕೊಂದದ್ದಕ್ಕಿಂತಲೂ ದೊಡ್ಡಕಾರ್ಯವೆಂದು ಹೇಳುತ್ತಿದ್ದೀರಿ. ಕುಂಭಕರ್ಣರಾವಣರನ್ನು ಕಡೆಗಣಿಸಿ

This content should not be copied/reproduced without the consent of Krishna Kamala Pathashaala

ಇಂದ್ರಜಿತ್ತುವನ್ನೇಕೆ ನೀವೆಲ್ಲರೂ ಇಷ್ಟುಬಗೆಯಲ್ಲಿ ಹೊಗಳುತ್ತಿದ್ದೀರಿ? ಒಂದುವೇಳೆ ರಾವಣನಿಗಿಂತಲೂ ಅವನ ಮಗ ಇಂದ್ರಜಿತ್ತುವೇ ಹೆಚ್ಚು ಪರಾಕ್ರಮಿಯೆಂದು ನಿಮ್ಮೆಲ್ಲರ ಅಭಿಮತವಾಗಿದ್ದರೆ, ಅದರ ಕಾರಣವನ್ನು ನೀವು ನನಗೆ ತಿಳಿಸಿ. ಅವನ ಪ್ರಭಾವ ಎಂತಹುದು? ಅವನ ಬಲಪರಾಕ್ರಮಗಳು ಎಷ್ಟು? ರಾವಣನಿಗಿಂತಲೂ ಅವನ ಮಗನೇ ಹೆಚ್ಚು ಬಲಶಾಲಿ ಎಂದು ಹೇಳುವುದಕ್ಕೆ ಪ್ರಬಲವಾದ ಕಾರಣವಾದರೂ ಏನು? ಈ ವಿಷಯವು ರಹಸ್ಯವಾದುದಲ್ಲ ಎಂದಾಗಿದ್ದರೆ, ನಾನು ಕೇಳಬಹುದಾದ ವಿಷಯ ಎಂದು ನಿಮಗೆ ಅನಿಸಿದರೆ, ದಯಮಾಡಿ ಈ ರಹಸ್ಯವನ್ನು ನನಗೆ ಹೇಳಿ. ಈ ವಿಷಯದಲ್ಲಿ ನಾನು ನಿಮಗೆ ಅಪ್ಪಣೆ ಮಾಡುತ್ತಿಲ್ಲ. ಬದಲಾಗಿ ಹೇಳಿರೆಂದು ಬೇಡಿಕೊಳ್ಳುತ್ತಿದ್ದೇನೆ. ರಾವಣನ ಮಗ ಇಂದ್ರಜಿತ್ತುವು ಸ್ವರ್ಗಾಧಿಪತಿ ಇಂದ್ರನನ್ನು ಗೆದ್ದು "ಇಂದ್ರಜಿತ್" ಎಂಬ ಹೆಸರನ್ನು ಹೇಗೆ ಪಡೆದನು? ಅವನು ಯಾರಿಂದ ವರವನ್ನು ಪಡೆದನು? ಹೇಗೆ ಪಡೆದನು? ಅವನು ಇಷ್ಟು ಬಲಿಷ್ಠನಾದುದು ಹೇಗೆ? ರಾವಣನು ತನ್ನ ಮಗ ಇಂದ್ರಜಿತ್ತುವಿಗಿಂತ ಹೆಚ್ಚು ಬಲಿಷ್ಠನಾಗಿ ಏಕೆ ಆಗಲಿಲ್ಲ? ಎಲೈ ಋಷಿಪುಂಗವರೇ! ಯುದ್ಧರಂಗದಲ್ಲಿ ಇಂದ್ರಜಿತ್ತುವು ತನ್ನ ತಂದೆ ರಾವಣನಿಗಿಂತಲೂ ಹೆಚ್ಚು ಬಲಿಷ್ಠನಾಗಿ ಯುದ್ಧಮಾಡಲು ಹೇಗೆ ಸಾಧ್ಯವಾಯಿತು? ಅವನು ಇಂದ್ರನನ್ನು ಹೇಗೆ ಗೆದ್ದನು?

ಕಥಂ ಪಿತುಶ್ಚಾಪ್ಯಧಿಕೋ ಮಹಾಹವೇ
ಶಕ್ರಸ್ಯ ಜೇತಾ ಹಿ ಕಥಂ ಸರಾಕ್ಷಸಃ ।
ವರಾಶ್ಚ ಲಬ್ಧಾಃ ಕಥಯಸ್ವ ಮೇಽದ್ಯ
ಪ್ರಾಪೃಚ್ಛತಾಸ್ಯ ಮುನೀಂದ್ರ ಸರ್ವಮ್ ॥

(ವಾ.ರಾ. ಉ.ಕಾಂ. 1–41)

ತಂದೆಗಿಂತಲೂ ಅಧಿಕಬಲಶಾಲಿಯಾಗಿ ದೇವೇಂದ್ರನನ್ನು ಗೆದ್ದುದು ಹೇಗೆ? ಅನೇಕರೀತಿಯ ವರಗಳನ್ನು ಪಡೆಯಲು ಅವನಿಗೆ ಹೇಗೆ ಸಾಧ್ಯವಾಯಿತು? ಈ ಎಲ್ಲ ನನ್ನ ಪ್ರಶ್ನೆಗಳಿಗೂ, ಸಂದೇಹಗಳಿಗೂ ಸರಿಯಾದ ಉತ್ತರಗಳನ್ನು ಕೃಪೆಮಾಡಿ ನನಗೆ ತಿಳಿಸಿ. ಇಂದ್ರಜಿತ್ತುವಿಗೆ ಸಂಬಂಧಪಟ್ಟ ಎಲ್ಲ ಇತಿವೃತ್ತಗಳನ್ನೂ ನನಗೆ ತಿಳಿಸುವ ಕೃಪೆಮಾಡಿ ಎಂದು ಶ್ರೀರಾಮನು ಆ ಮುನಿಗಳನ್ನು ವಿನಯಪೂರ್ವಕವಾಗಿ ಪ್ರಾರ್ಥಿಸಿದನು.

ಇಲ್ಲಿಗೆ ವಾಲ್ಮೀಕಿರಾಮಾಯಣದ ಉತ್ತರಕಾಂಡದಲ್ಲಿ
ಮೊದಲನೆಯ ಸರ್ಗದ ಕಥೆಯು ಮುಗಿಯಿತು.

.. .. ಮುಂದಿನ ಸಂಚಿಕೆಯಲ್ಲಿ ಮುಂದುವರೆಯುತ್ತದೆ

This content should not be copied/reproduced without the consent of Krishna Kamala Pathashaala



अविद्यास्वरूपविमर्शः - २
अनुवृत्तः

महामहोपाध्यायः महाविद्वान्
डा. मणिद्राविडशास्त्री
मद्रपुरी संस्कृतमहाविद्यालयः
मैलापूर्, चेन्नै –4.

पूर्वस्मिन् भागे- *तत्र यथा आत्मनः कार्यबन्धो न वास्तवः, किन्तु आरोपितः, एवं कारणबन्धोऽपि तथा। अत एव सोऽपि विपर्यास उच्यते— विपर्यासे तयोः क्षीणे तुरीयं पदमश्नुते इत्यत्र। तयोश्च विपर्यासयोः क्षयः तत्वज्ञानेन भवतीत्यपि तत्रैव भाष्यकारैरुक्तम्— अतस्तयोः कार्यकारणस्थानयोरन्यथाग्रहणाग्रहण-लक्षणविपर्यासे कार्यकारणबन्धरूपे परमार्थतत्त्वप्रतिबोधतः क्षीणे तुरीयं पदम् अश्नुते । इति ॥*

अत्र तत्त्वाज्ञानं सर्वान्यथाग्रहणकारणमिति स्पष्टं निर्दिष्टम्। तदेव माया, अविद्या, आवरणम् इत्यादिशब्दैरपि निर्दिश्यते। तत् किं तत्त्वज्ञानस्याभाव एव, उताभावाद्भिन्नं किंचित्? यद्यपि अग्रहणम् इति श्रवणे अभावात्मकं प्रतीयते, तथापि विचारेण अतथारूपत्वमवगम्यते। तथाहि— इदं तत्त्वाग्रहणं सर्वभावकारणत्वेन, बीजभावत्वेन च निरूप्यतेऽत्रैव ग्रन्थे। यथा — तत्त्वाप्रतिबोधमात्रमेव हि बीजं प्राज्ञत्वे निमित्तम् इति। तथा— स्वेन अविद्याकृतनामरूपमायास्वरूपेण सतामेव सर्वभावानां विश्वतैजसप्राज्ञभेदानां प्रभवः उत्पत्तिः इति च। अत्र तत्त्वाप्रतिबोधस्य बीजत्वं कारणत्वम्। तथा सर्वभावानाम् उत्पत्तेः प्राक् अविद्याकृतनामरूपमायास्वरूपेण सत्त्वोक्त्या उपादानकारणत्वविवक्षा च लभ्यते। यद्यपि यथा रज्ज्वां प्राक्सर्पोत्पत्तेः रज्ज्वात्मना सर्पः सन्नेवासीत् , एवं सर्वभावानामुत्पत्तेः प्राक्प्राणबीजात्मनैव सत्त्वमिति भाष्ये दृष्टान्तदार्ष्टान्तिकयोः तुल्यतायै— रज्जौ सर्पभ्रमे भासमानस्य सर्पस्योत्पत्तेः प्राक् रज्ज्वात्मना सत्त्वम् , एवं सर्वभावानाम् उत्पत्तेः प्राक् ब्रह्मरूपेण सत्त्वमिति व्याख्यानं कर्तव्यम्। अन्यथा स्फुटं वैषम्यं स्यात् , दृष्टान्ते रज्ज्वात्मना

This content should not be copied/reproduced without the consent of Krishna Kamala Pathashaala

सत्त्वम् , न तु तदज्ञानात्मना, दार्ष्टान्तिके तु अविद्यात्मनेति। तथापि दृष्टान्तेऽपि रज्ज्वात्मना तस्य सर्पस्य प्राक् सद्भावो नेष्यते, तस्य मिथ्यात्वात्। आदावन्ते च यन्नास्ति वर्तमानेऽपि तत् तथा इति न्यायात् । किन्तु कार्यस्योत्पत्तेः प्राक् ध्वंसोत्तरं च यच्छिष्यते तद्रूपेण कार्यस्य प्रागूर्ध्वं च सत्ता व्यवह्रियते, यथा घटादेः मृदादिरूपेण। घटोत्पत्तेः प्रागूर्ध्वं च मृदः सत्त्वात्। उक्तसर्पस्य तु बाधोत्तरं तत्कारणस्याज्ञानस्याभावात् , न तद्रूपेण सत्ता दृष्टान्तयितुं शक्यत इति, रज्जुरेव सर्पात् प्रागूर्ध्वं च सती दृष्टान्तिता लोकबुद्ध्यनुसारेण। उक्तदार्ष्टान्तिके तु प्रलयकाले अविद्यात्मकबीजस्यानुवृत्त्या तद्रूपेण सर्वभावानां सद्भावो वक्तुं शक्यः। आत्मतत्त्वज्ञानेन हि तस्याः निवृत्तिः। उत्पत्तिप्रलयादिव्यवहारश्च प्राक्प्रतिबोधादेवेति सिद्धान्तः। अत एव—“कथं प्राणशब्दत्वम् अव्याकृतस्य ? "प्राणबन्धनं हि सोम्य मनः"(छा.उ.६.८.२) इति श्रुतेः । ननु तत्र “सदेव सोम्य”(छा.उ ६. २.१) इति प्रकृतं सद्ब्रह्म प्राणशब्दवाच्यम् । नैष दोषो, बीजात्मकत्वाभ्युपगमात् सतः। यद्यपि तद्ब्रह्म प्राणशब्दवाच्यं तत्र, तथापि जीवप्रसवबीजात्मकत्वम् अपरित्यज्य एव प्राणशब्दत्वं सतः सच्छब्दवाच्यता च । यदि हि निर्बीजरूपं विवक्षितं ब्रह्माभविष्यत् “नेति नेति”(बृ.उ.४.४.२२) “यतो वाचो निवर्तन्ते” (तै.उ.२.९) “अन्यदेव तद्विदितादथाविदितात्” (के.उ१.३) इत्यवक्ष्यत् ,“न सत्तन्नासदुच्यते”(गीता.१३.१२) इति स्मृतेः। निर्बीजतयैव चेत् सति लीनानां सुषुप्तप्रलययोः पुनरुत्थानानुपपत्तिः स्यात्। मुक्तानां च पुनरुत्पत्तिप्रसङ्गो बीजाभावाविशेषात् । ज्ञानदाह्यबीजाभावे च ज्ञानानर्थक्यप्रसङ्गः। तस्मात् सबीजत्वाभ्युपगमेन एव सतः प्राणत्वव्यपदेशः सर्वश्रुतिषु च कारणत्वव्यपदेशः” — इति भाष्यकारैः अविद्यात्मकबीजशक्तिमपरित्यज्यैव तदात्मना ब्रह्मणः कारणत्वविवक्षया सर्वभावानां प्राक्सत्त्वोक्तिः इति स्पष्टीकृतम्। वस्तुतो दृष्टान्तदार्ष्टान्तिकयोः तुल्यता उभयत्रापि

This content should not be copied/reproduced without the consent of Krishna Kamala Pathashaala

अविद्याया एव सर्पादिकार्ये सर्वभावेषु च कारणत्वमादाय। तदेतत् सर्वं भाष्ये प्रदर्श्यते—

प्रभवः सर्वभावानां सतामिति विनिश्चयः ।
सर्वं जनयति प्राणश्चेतोंऽशून्पुरुषः पृथक् ॥ ६ ॥

सतां विद्यमानानां स्वेन अविद्याकृतनामरूपमायास्वरूपेण सर्वभावानां विश्वतैजसप्राज्ञभेदानां प्रभवः उत्पत्तिः। वक्ष्यति च— 'वन्ध्यापुत्रो न तत्त्वेन मायया वापि जायते' (मा. का. ३ । २८) इति । यदि ह्यसतामेव जन्म स्यात् , ब्रह्मणोऽव्यवहार्यस्य ग्रहणद्वाराभावादसत्त्वप्रसङ्गः । दृष्टं च रज्जुसर्पादीनामविद्याकृतमायाबीजोत्पन्नानां रज्ज्वाद्यात्मना सत्त्वम्। न हि निरास्पदा रज्जुसर्पमृगतृष्णिकादयः क्वचिदुपलभ्यन्ते केनचित् । यथा रज्ज्वां प्राक्सर्पोत्पत्तेः रज्ज्वात्मना सर्पः सन्नेवासीत् , एवं सर्वभावानामुत्पत्तेः प्राक्प्राणबीजात्मनैव सत्त्वमिति । श्रुतिरपि वक्ति 'ब्रह्मैवेदम्' (मु. उ. २ । २ । १२) 'आत्मैवेदमग्र आसीत्' (बृ. उ. १ । ४ । १) इति । अतः सर्वं जनयति प्राणः चेतोंऽशून् अंशव इव रवेश्चिदात्मकस्य पुरुषस्य चेतोरूपा जलार्कसमाः प्राज्ञतैजसविश्वभेदेन देवमनुष्यतिर्यगादिदेहभेदेषु विभाव्यमानाश्चेतोंऽशवो ये, तान् पुरुषः पृथक् सृजति विषयभावविलक्षणानग्निविस्फुलिङ्गवत् सलक्षणान् जलार्कवच्च जीवलक्षणांस्त्वितरान् सर्वभावान् प्राणो बीजात्मा जनयति, 'यथोर्णनाभिः. . . यथाग्नेः क्षुद्रा विस्फुलिङ्गाः' (बृ. उ. २ । १ । २०) इत्यादिश्रुतेः"॥

किंचाभावस्य कारणत्वं भाष्यकारैः कण्ठतो निराकृतमिति कथम् अभावरूपस्याज्ञानस्य कारणत्वं भाष्यकाराभिमतं भवितुमर्हति । अग्रहणम् अज्ञानम् अविद्या इत्यादिनञ्समासेन निर्देशस्तु अधर्मः अब्राह्मणः इत्यादाविव विरोधार्थकत्वेऽप्युपपद्यते।

This content should not be copied/reproduced without the consent of Krishna Kamala Pathashaala

यद्यपि कार्यत्वकारणत्वयोरुभयोरपि अन्यथाग्रहणे तत्त्वाग्रहणे कल्पितत्वं समम् , तथापि दार्ष्टान्तिके कल्पितत्वं न दृष्टान्ते रज्जुसर्पादाविवाव्यावहारिकम् (प्रातिभासिकम्) , किन्तु व्यावहारिकं सत्त्वमभ्युपेत्यैवेति व्यवहारानुसारिणी कारणत्वकल्पना युक्ता। भाष्यकाराणां च व्यवहारदशायामेव अभावकारणत्वं निराकृतवतां न अभावरूपस्याज्ञानस्य कारणत्वमभिप्रेतं भवितुमर्हतीति सुधीभिरुन्नेयम्॥

...अनुवर्तिष्यते

This content should not be copied/reproduced without the consent of Krishna Kamala Pathashaala

चतुः श्लोकिभागवतम्

Smt. Indira Shastry
U.S.A

Bhagavata is a Maha Purana written by Sri. Veda Vyasa. This Maha Purana has both Bhakti and Jnana explained through several stories. Even though the theme of Bhagavata is Bhakti, Advaita jnana expounded by Adi Shankara Bhagavatpadaacharya is very lucidly explained in this Purana. This Maha purana has 18,000 shlokas. The gist of the whole Purana is presented in the 2nd Skandha, 9th chapter from shloka 32 to shloka 35. Thus, this portion is very well familiar amongst scholors as चतुःश्लोकी भागवतम् or as मूल भागवतम्. That is why the 2nd Skandha is considered as the origin for the original Bhagavata, over which subsequent ideas were built upon. In Chatushloki Bhagavata consisting of four shlokas, Bhagavan Narayana explains to Chaturmukha Brahma, the entire philosophical essence of not only the Bhagavata but the essence of all the Upanishads in four divisions as ब्रह्मतत्त्वम्, मायातत्त्वम्, जगतत्त्वम् and जिज्ञासुतत्त्वम्.

In this Purana, Mahavishnu or Narayana is portrayed as Supreme Paramatma, who is said to be none other than the Brahman which is the very subject of all Vedantas. His incoronations, purpose and Leela are explained in several Skanda's. From Dashama Skanda, Krishnavatara is explained starting from his Baala Leela.

The preabmble for these 4 shlokas is as follows:

Chaturmukha Brahma was born from the navel of Mahavishnu. When he took birth, he saw only water everywhere and did not know what to do. He suddenly heard the word **"तप:".** Then he started doing tapas on Nirguna Paramatma. Mahavishnu gave him his vision. Then, he asked Chaturmukha Brahma to ask for a boon. Brahma asked about the creation aspect and the ultimate reality. Mahavishnu then explains to Chaturmukha Brahma that Samyajjnana, which is the

This content should not be copied/reproduced without the consent of Krishna Kamala Pathashaala

ultimate reality, which is Parama Rahasya, which is associated with भक्तियोगयुक्तविज्ञान in four shlokas which is very popularly termed as चतुःश्लोकिभागवतम्. This is the quintessence of Bhagavatha Purana. Let's try to understand the message given to the entire mankind through these 4 Shlokas.

श्रीभगवानुवाच ।

अहमेवासमेवाग्रे नान्यद्यत्सदसत्परम् ।।1।।
पश्चादहं यदेतच्च योऽवशिष्येत सोऽस्म्यहम् ॥1

Bhagavan says: It is Me, who existed in the beginning, before creation. The स्थूल and सूक्ष्म रूप प्रपञ्च, Pradhaana, which is different than this, was also in me only and there was nothing other than Me. After the creation, the प्रपञ्च that appears is also Me only. After the destruction of the सृष्टप्रपञ्च also, what remains is Me only. Since I don't have the beginning or end, I am अनादि and अनन्त, thus I am परिपूर्ण.

So, what Bhagavan Narayana is trying to say through this shloka, is: there was neither सत् nor असत्. Before creation Nothing else existed, nor anything that transcends the creation also did exist. So, Bhagavan says, that which you see now is also Me, and after destruction of this created universe also, what remains will also be Me only. That is during the time of creation, brahman is in the form of Jagat and after the destruction of the created universe, brahman alone will be there.

That means when Paramatma was in कारणावस्था, prakruti in the form of division of Nama and Roopa, will be the body of paramatma. In his कार्यावस्था, division of Prakruti and Purusha, as name and form will become his Shareera. It's said that Brahman is चेतनाचेतनविलक्षण. But in that प्राकृतिकशरीर, of both Chetana and Achetana Vastu, Paramatma will not go through the Vikaras. He is stable कूटस्थ, निर्विकारी ।

In Bhagavad Gita, Lord Krishna says:

देहिनोऽस्मिन्यथा देहे कौमारं यौवनं जरा। (2.13) Meaning, this innate Jeeva that dwells within a physical body- witnesses childhood, youth, old age, and death. Just like how jeevatma does not

This content should not be copied/reproduced without the consent of Krishna Kamala Pathashaala

go through the Shad Vikara जायते, अस्ति, परिणमते, वर्धते, अपक्षीयते नश्यति इति. and only the shareera goes through that, same way that Paramatma also does not go through the vikara in the form of ajnana, dukha, Parinama, jadattva and other Vikaras in reality. Therefore, there is no doubt that brahman is सदसद् विलक्षण. न सत्तन्नासदुच्यते I (भ.गी. 13-12).

Bhagavan says, before the creation, even during the time of creation and during Pralaya kaala, myself, kaala and prakruti existed. But in pralaya, kaala and prakruti appeared to exist as different than me. Even then, they were under the influence of my Maya and were not independent. Then even during the स्तिथि काल, I am this Jagat only. Therefore, in all the three periods of time, in कालत्रय, I am independent. Therefore, Ishvara is स्वतन्त्र तत्त्व. Jeeva, Prakruti and others are अस्वतन्त्र तत्त्व. The word अहमेव denotes that Bhagavan is सदसद् विलक्षण, सर्वज्ञम् and सर्व शक्ति.

अहमेव आसम् indicates, for जगत् सृष्टि, पालन and संहार the Paramaatma is the cause.

Brahman, who is सर्वज्ञम्, सर्व शक्ति, सर्व व्यापक in all the 3 periods of time in the entire Brahmanda, who has taken over the entire universe as एकमेव अद्वितीयं ब्रह्म with Guna and Kriya, that brahman should be known as Paramatma tattva. This explains the Brahma Tattva.

The next shloka talks about Maya shakti of Brahman.

ऋतेऽर्थं यत्प्रतीयेत न प्रतीयेत चात्मनि ।
तद्विद्यादात्मनो मायां यथाऽऽभासो यथा तमः ॥२॥

Bhagavan says: Whatever appears to be significant besides me, has no reality in itself. It is unreal like a reflection, like appearance, where there is nothing of value or it's like darkness. Know this Avidya as my maya shakti. This is the Maya tattva.

ऋतेऽर्थम् denotes that paramatma's body is परस्पर विलक्षण चेतनाचेतन शरीर.

It's said as या मा सा माया --- this is the definition of maya. What does not exist absolutely is Maya. Maya is that which appears to be there without it actually being there. Maya makes the unreal appear as real, and the real difficult to perceive. Paramatma says that Maya takes place in

This content should not be copied/reproduced without the consent of Krishna Kamala Pathashaala

him, and He uses Maya as his shakti. But he is beyond Maya and is untouched by it. Maya is the creative power of Paramatma. Due to Maya, Avikaari Brahman appears as the world, but it does not actually become the world. There is a shloka which says that Maya is:

मुख्यतो विष्णु शक्तिः मायाशब्देन भण्यते ।
उपचारतस्तु प्रकृतिः जीवश्चैव हि भण्यते ॥
सर्वं परे स्थितमपि नैव तत्रेति भण्यते ।

The word Maya is declared as predominantly Vishnu's Shakti. For pretense, it's said as prakruti or as jeeva. Even though everything is in supreme Brahman, it's said as non-existent.

Maya has two shakti's as Avarana and Vikshepa. In the case of Rajju-Sarpa, first, the reality, which is the rope, is covered or concealed. This is done by the Avarana shakti. Second, the maya vastu, the snake, is projected by the vikshepa shakti. The Avarana shakti is called the power of concealment and the vikshepa shakti is the power of projection. Avarana is the cause, and vikshepa is the effect.

Avarana is covering the Atma Chaitanya in us and projecting it as jeeva. Creating Atma-abhimana in Shareera is Vikshepa shakti. This explains the माया तत्त्व.

-To be continued

This content should not be copied/reproduced without the consent of Krishna Kamala Pathashaala

avidyA

Jacqeline Suthren Hirst, MA. Phd.;(Cambridge)
Research Scholor, University of Manchestor

Avidyā: bhāva, bīja or mithyājñāna? or, the story of the eighteenth elephant

Previous Issue- I shall therefore focus on Satchidanandendra's careful distinctions between different senses of the term avidyā in relation to interpretations of authoritative passages on the three states of waking, dreaming and deep sleep, found in the fourth Khaṇḍa of the present work. This exploration of sources follows his statement of the various arguments brought forward by those defending avidyā as a real entity (Khaṇḍa 2) and his own rational counter-arguments (Khaṇḍa 3). In particular, I consider avidyā interpreted as bhāva, bīja and mithyājñāna, and the relation of deep sleep to a 'Fourth'.

2. Deep sleep and the rejection of *avidyā* as *bhāva*

The relation of deep sleep to a 'Fourth' is crucial as it bears on the purported location of *avidyā*. By differentiating deep sleep from a transcendent fourth state, the opponent seeks to locate root *avidyā* in the state of deep sleep, thus protecting ultimate reality from the charge of subtle differentiation. The Upaniṣad where a 'fourth' (*turīya*) is most clearly mentioned is the *Māṇḍūkya.* Śaṃkara's commentary on this short Upaniṣad is part of his commentary on the *Gauḍapādīya-kārikā*s, into which it is integrated. Satchidanandendra, who does not wish to concede the existence of root *avidyā* in deep sleep, approaches the problem by arguing that there are only three states, not four, according to Śaṃkara's commentaries, including the *GKBh.*[1] Here it is important to be careful. In his summary recapitulating a method for refuting *avidyā* as an entity based on the authority of *śruti* (*śrutipramāṇānusāriṇy eva bhāvāvidyānirasanaprakriyā*), one point he makes is that *śruti* passages do not set out a pure state separate from deep sleep (*suṣuptyatirikta-śuddhāvasthāyāḥ śrutiṣv*

[1] *MN* 174.

This content should not be copied/reproduced without the consent of Krishna Kamala Pathashaala

apratipādanāt). It is not, as Alston's translation goes on to say, that 'if certain Vedic texts speak of "dreamless sleep and 'the Fourth'" one is forced (by the teaching of the Veda taken as a whole) to take the two terms as having equivalent value,' which might misleadingly suggest synonymity.[2] Rather, the 'fourth' is not a state at all,[3] but is precisely other than all states, or, putting it differently, the only reality in all states which, as Śaṃkara would put it, are merely superimpositions. Thus, following Gauḍapāda, Satchidanandendra points out that, whereas in the states of waking and dreaming, there is *avidyā* as misconception, in deep sleep, there is the absence of conception. This lack cannot be equated with a real entity (*bhāva*), which is not the topic of such passages. Rather their end is to make known *avidyā tout simple* (*avidyāmātra*)[4] or *avidyā* seen as misconception. This view of *avidyā* is faithful to that on superimposition, *avidyā* as misconception, found throughout Śaṃkara's works.[5]

Before returning to this issue below, it will be useful to look at how Satchidanandendra, on the basis of triple foundation and commentarial passages, does actually characterise deep sleep. Seen as a place of tranquillity (a positive way of putting absence of conception) and even pleasantness or ease (*sukha*), it can, from a conventional standpoint, be taken as an analogy for liberation. But this should neither be understood as equating liberation with deep sleep nor be misunderstood as a substantive teaching about *avidyā* as an entity. The first argument requires us to understand how analogy works,

---

[2] Rather, Satchidanandendra carefully says: 'despite what is set out in some places, in order not to deny the common function (*yogakṣema* योगक्षेम) of deep sleep and the fourth being resting places.' *MN* 157, p.196. *kvacitpratipādane 'pi suṣuptiturīyayoḥ samānayogakṣematvasyānivāraṇīyatvāt*. क्वचित्प्रतिपादने ऽपि सुषुप्तितुरिययोः समानयोगक्षेमत्वस्यानिवारनणीयत्वात् ।

[3] cf *MN* 174, p.219. *tathāpyupaniṣatsu turīyaṃ na sthānāntaram ity ucyate.* तथाप्युपनिषत्सु तुरीयं न स्थानान्तरमित्युच्यते | *MN* 155 concedes it only for the sake of argument and to reject the notion that trace *avidyā* अविद्या continues to exist for the one who knows the ultimate before the final death. Such a view of *avidyā* अविद्या as *leśa* लेश is found in Ānandagiri, for example, but not in Śaṃkara's own work. See J.G. Suthren Hirst, 'When the body does not fall: Śaṃkara, Sureśvara and Ānandagiri on living while liberated', *Journal of Hindu Studies* 9 (2016):1-28.

[4] *MN* 157, p.196. *avidyāmātrabodhakavākyānāṃ bhāvāvidyāviṣayatve pramāṇābhāvāt* अविद्यामात्रबोधकवाक्यानां भावाविद्याविषयत्वे प्रमाणाभावात्

[5] cf his remark in *BSBh* 2.3.40: "…*avidyāpratyupasthāpitadvaitasampṛkta ātmā svapna-jāgaritāvasthayoḥ kartā duḥkhī bhavati* … अविद्याप्रत्युपस्थापितद्वैतसंपृक्त आत्मा स्वप्नजागरितावथयोः कर्ता दुःखी भवति |" which Satchidanandendra quotes in *MN* 157, p.194. For further discussion and references, see J.G. Suthren Hirst, *Śaṃkara's Advaita Vedānta*, pp.85-88 and index.

This content should not be copied/reproduced without the consent of Krishna Kamala Pathashaala

namely by comparison on a key point, without collapsing the (conventional) difference between the example and what is exemplified. The point of comparison here is the freedom from suffering and dis-ease (*duḥkha*) due to the lack of the constructions of misconception in both deep sleep – to which the individual self resorts for respite from the problems of waking and dreaming – and final isolation or liberation (*kaivalya* is Satchidanandendra's preferred term in this discussion). To this extent, Satchidanandendra argues that, as Śaṃkara puts it in *Bṛhadāraṇyakopaniṣadbhāṣya* 4.3.34, the *jīva* directly experiences the self in deep sleep,[6] for there are no intermediary differentiations of conventional subject-object experience to occlude that realisation. In this sense and, as Śaṃkara's long commentary on *Brahmasūtra* 3.2.7 makes clear, by apparent contrast with experience in the waking and dreaming states, it may be said, as Satchidanandendra does: 'The state of deep sleep is simply the supreme self, according to passages such as "The absence of that [i.e. waking or dream] in the *nāḍī*s" (*BS* 3.2.7).'[7] Śaṃkara is, of course, frequently at pains to point out that, in reality all three states, waking, dreaming and deep sleep, are nothing other than the supreme Self. But the particular teaching that 'the state of deep sleep is indeed the self' has 'the purpose of ascertaining that the individual self (*jīva*) is the self which is *brahman* and of ascertaining that it is free from the conventional dealings of dreaming and waking',[8] thereby ruling out the possibility that its purpose is to establish the existence of *avidyā* as a real entity, the point Satchidanandendra wishes to demonstrate.[9]

---

[6] *BṛUpBh* 4.3.34 *tatra ca sarvātmabhāvaḥ svabhāvo 'sya, evam avidyākāmakarmādi-sarvasaṃsāradharmasaṃbandhātītaṃ rūpam asya sākṣātsuṣupte gṛhyate ityetad vijñāpitam*. तत्र च सर्वात्मभावः स्वभावो ऽस्य, एवमविद्याकामकर्मादिसर्वसंसारधर्मसंबन्धातीतं रुपमस्य साक्षात्सुषुप्ते गृह्यते इत्येतद्विज्नापितम् । In *Ten Principal Upanishads with Śāṅkarabhāṣya*, vol. 1 (Delhi: Motilal Banarsidass, 1987 reprint).

[7] *MN* 159, p.197. *tadabhāvo nāḍīṣu* (*BS* 3.2.7) *ityādinā ca paramātmaiva suptisthānam ity ucyate*. तदभावो नाडीषु (ब्र. सू. ३–२–७) इत्यादिना च **परमात्मैव सुप्तिस्थानमि**त्युच्यते |

[8] *BSBh* 3.2.7, p.635, ll.3-4. [*tena tu vijñānena*] *prayojanam asti jīvasya brahmātmatvāvadhāraṇaṃ svapnajāgaritavyavahāravimuktatvāvadhāraṇaṃ ca. tasmād ātmaiva suptisthānam*. [तेन तु विज्ञानेन] प्रयोजनमस्ति जीवस्य ब्रह्मात्मत्वावधारनं स्वप्नजागरितव्यवहारविमुक्तत्वावधारणं च | तस्मादात्मैव सुप्तिस्थानम् | In *Brahmasūtra-Śāṅkarabhāṣyam with the commentaries …of Govindānanda, …Vācaspatimiśra and …Ānandagiri*, ed. J.L. Shastri (Delhi: Motilal Banarsidass, 1996 reprint).

[9] It is important that here, as elsewhere, Śaṃkara clearly identifies the *prayojana* प्रयोजन of such passages. For it is a Mīmāṃsā principle that a passage has a single prayojana प्रयोजन (purpose). It is this principle that Satchidanandendra draws on implicitly as he demonstrates the primary purposes of both *Sūtra*s and Upaniṣadic passages. Once established,

This content should not be copied/reproduced without the consent of Krishna Kamala Pathashaala

Notwithstanding all this, the person in deep sleep will wake up, because their misconceptions have not been entirely removed, as Satchidanandendra acknowledges at the end of his section exploring the *Brahmasūtra*s themselves.[10] This makes deep sleep unlike liberation, from which there is no return, since true cognition has arisen and misconception has been destroyed according to Śaṃkara (*avidyādhvāntaṃ vidyāpradīpena vidhūya*).[11] Nonetheless, Śaṃkara's paralleling of deep sleep with liberation, Satchidanandendra emphasises, clearly shows that, in Śaṃkara's judgment, *ajñāna* as misconception, and specifically as a real entity, is absent from both.

Initially, the opponent tries to argue back that the very fact that a person awakens from deep sleep is proof that *avidyā* as an entity exists in deep sleep. Otherwise, how can that awakening be explained? The argument put forward by Satchidanandendra – that it occurs because misconception has not yet been entirely rooted out - is specious, because it just sidesteps the problem. But then the opponent takes a more subtle tack. Actually, concedes the opponent, you are right. There is no *avidyā* in the sense of false cognition in deep sleep. That is why there is no suffering and indeed even happiness.

> For in deep sleep *avidyā* is not clearly experienced because of the absence of ego. But, in awakening, its cause having been brought out (by the ego thinking), "I do not know this. I am really confused," it occurs as the object of clear experience. To this extent, having established

---

these rule out alternative claims that their actual purpose is to establish the existence of *avidyā* विद्या as a real entity. Contextual reading is key.

[10] *MN* 159, p.198. *yāvad ajñānakalpitaṃ saṃsāritvaṃ bhavati tāvad vyaktāvyaktānyatararūpam āsthāya tiṣṭhatīva buddhyupādhir iti.* यावदज्ञानकल्पितं संसारित्वं भवति तावद्व्यक्ताव्यक्तान्यतररुपमास्थाय □□□□□□□□ बुद्ध्युपाधिरिति | 'For as long as being a transmigrator, constructed through ignorance, is the case, the adjunct of the mind persists, as it were, taking alternate manifest and unmanifest forms [i.e. waking/dreaming and deep sleep forms].'

[11] *MN* 157, p.195-96, continues the quotation from *BSBh* 2.3.40: "*…tathā muktāvasthāyām apy avidyādhvāntaṃ vidyāpradīpena vidhūyātmaiva kevalo nirvṛtaḥ sukhī bhavati*" (BSBh 2.3.40) *iti.* "...तथा मुक्तावस्थायामप्यविद्याध्वान्तं विद्याप्रदीपेन विधूयात्मैव केवलो □□□□□□□□ सुखी भवति" (सु. भा. २–३–४०) इति |

This content should not be copied/reproduced without the consent of Krishna Kamala Pathashaala

> that it (*avidyā* as cause) is nearly not existing, although it is existing, it is said in some commentary that *avidyā* does not exist at the time of deep sleep.[12]

In other words, the opponent is also conceding that there are passages in Śaṃkara which look as if *avidyā* is denied in deep sleep but they do not necessarily undermine his case. Further, however, the opponent even concedes that it would be ridiculous to identify deep sleep and liberation, a point that had earlier been made against the opponent's own interpretation, and accepts that deep sleep is an example for liberation. But with this concession comes a clever sleight of hand:

> Therefore the commentator's intention is indeed the existence of *avidyā* insofar as it is not an object of constructed experience in its seed form.[13]

…To be continued

[12] *suṣupte hy ahaṃkārābhāvād avidyā na spaṣṭam anubhūyate, prabodhe tu svakāryaṃ niṣpādya "idam ahaṃ na jāne mūḍha evāsmi" iti spaṣṭānubhavaviṣayatvam gacchatīty etāvatā kvacidbhāṣye suṣuptikāle 'vidyā nāstīty uktaṃ vidyamānam* api tadavidyamānaprāyam iti kṛtvā.* सुषुप्ते ह्यहंकाराभावादविद्या न स्पष्टमनुभूयते, प्रबोधे तु स्वकार्यं निष्पाद्य "इदमहं न जाने मूढ एवास्मि " इति स्पष्टानुभवविषयत्वं गच्छतीत्येतावता क्वचिद्भाष्ये सुषुप्तिकाले ऽविद्या नास्तीत्युक्तं विद्यमानमपि * तदविद्यमानप्रायमिति कृत्वा |

*reading *vidyamānam* विद्यमानम् rather than *vidyāmānam* विद्यामानम्

[13] *na punar nāsty eva paramārthata iti, anyathā suṣuptikaivalyayor vailakṣaṇyābhāva prasaṅgāt.* *tasmād bījarūpeṇa savikalpakānubhavāviṣayatvenāstitvam evāvidyāyā bhāṣyakārābhipretam. suṣuptidṛṣṭāntaś caitāvataiva kaivalyanirūpaṇe praṇīto bhāṣyakāreṇeti.* न पुनर्नास्त्येव परमार्थत इति, अन्यथा सुषुप्तिकैवल्ययोर्वैलक्षण्याभाव प्रसङ्गात् | तस्माद्बीजरुपेण सविकल्पकानुभवविषयत्वेनास्तित्वमेवाविद्याया भाष्यकाराभिप्रेतम् | सुषुप्तिदृष्टान्तश्चैतावतैव कैवल्यनिरुपने प्रणीतो भाष्यकारेणेति |

This content should not be copied/reproduced without the consent of Krishna Kamala Pathashaala